ಅಚಲ ತಿಂಗಳ ಪತ್ರಿಕೆ

26

ಬೆಲೆ - ಬಿಡಿಪ್ರತಿ : 4 ರೂ.

ಜುಲೈ - 2004

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 19 ಸಂಚಿಕೆ : 7

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರ,

ಕಳೆದ 19 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ಬದಲಾಗಿದೆ

ವಾರ್ಷಿಕ ಚಂದಾ - ರೂ. 50/- (ವ್ಯಕ್ತಿಗಳಿಗೆ)

ರೂ. 100/- (ಸಂಸ್ಥೆಗಳಿಗೆ)

ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)

ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ಏಡ್ಸ್ ಮಹಾಮಾರಿಯ ಸುಳಿಯಲ್ಲಿ

ಇಂದು ಇಡೀ ವಿಶ್ವದಲ್ಲಿಯೇ ಭಯೋತ್ಪಾದನೆಯ ಆತಂಕ ಎಲ್ಲೆಡೆ ಹೆಚ್ಚಿದೆ. ಭಯೋತ್ಪಾದನೆಯಿಂದ ಸಾವಿರಾರು ಜನರು ಸಾಯಬಹುದು. ಆದರೆ ಭಯೋತ್ಪಾದನೆಯ ಪಿಡುಗನ್ನು ಮೀರಿಸುವ ಭಯಂಕರ ಕಾಯಿಲೆ ಏಡ್ಸ್. ವಿಶ್ವದಲ್ಲಿ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡು ದುಃಸ್ವಪ್ನದಂತೆ ಕಾಡುತ್ತಿದೆ. ಕಳೆದ ವಾರವಷ್ಟೇ ಬ್ಯಾಂಕಾಂಕ್‌ನಲ್ಲಿ ನಡೆದ ವಿಶ್ವ ಸಂಸ್ಥೆಯು ನಡೆಸಿದ ಜಾಗತಿಕ ಸಮಾವೇಶದಲ್ಲಿ ಈ ಸಮಸ್ಯೆಯನ್ನು ಕುರಿತು ಚರ್ಚಿಸಲಾಯಿತು. ಏಡ್ಸ್‌ರೋಗದ ನಿಯಂತ್ರಯಣಕ್ಕೆ ಸಂಬಂಧಪಟ್ಟಂತೆ ಇನ್ನೂ ಗಂಭೀರ ಸ್ವರೂಪದ ಪ್ರಯತ್ನಗಳು ನಡೆಯಬೇಕೆಂದು, ವಿಶ್ವಸಮುದಾಯ ಈ ಬಗ್ಗೆ ಹೆಚ್ಚಿನ ಗಂಭೀರ ಪ್ರಯತ್ನ ನಡೆಸಿಲ್ಲವೆಂಬುದು ಈ ಸಮ್ಮೇಳನದಿಂದ ದೃಢಪಟ್ಟಿದೆ. ಏಡ್ಸ್ ರೋಗದ ನಿಯಂತ್ರಣದ ಜೊತೆಗೆ ಏಡ್ಸ್‌ರೋಗದ ಚಿಕಿತ್ಸೆಗೆ ಕೂಡ ಔಷಧಿಗಳು, ತಂತ್ರಜ್ಞಾನ ಸುಲಭ ಬೆಲೆಯಲ್ಲಿ ಜನಸಾಮಾನ್ಯನಿಗೆ ಸಿಗಬೇಕೆಂಬ ಅಂಶಗಳನ್ನು ಈ ಸಮ್ಮೇಳನದಲ್ಲಿ ಒತ್ತಿ ಹೇಳಲಾಯಿತು.

ಭಾರತದಲ್ಲಿಯೂ ಏಡ್ಸ್ ಶರವೇಗದಲ್ಲಿ ಬೆಳೆಯುತ್ತಿದೆ. ಸುಮಾರು ಐದು ದಶಲಕ್ಷ ಎಚ್.ಐ.ವಿ. ಏಡ್ಸ್ ರೋಗಿಗಳು ದೇಶದಲ್ಲಿರುವರೆಂದು ಅಂದಾಜು ಮಾಡಲಾಗಿದೆ. ಇನ್ನು ಕೆಲವೇ ವರ್ಷಗಳಲ್ಲಿ ಭಾರತ ಅತಿ ಹೆಚ್ಚು ಏಡ್ಸ್‌ರೋಗ ಹೊಂದಿರುವ ದೇಶಗಳೆಂಬ ಹೆಸರು ಪಡೆಯಬಹುದು. ಆದ್ದರಿಂದ ಸರ್ಕಾರ ಈ ದಿಕ್ಕಿನಲ್ಲಿ ಸೂಕ್ತಗಮನ ಹರಿಸಬೇಕಿದೆ. ಆರೋಗ್ಯಕ್ಕೆಂದು ಮೀಸಲಿಡುವ ಹಣದಲ್ಲಿ ಈ ರೋಗದ ನಿಯಂತ್ರಣ, ಚಿಕಿತ್ಸೆ ಮತ್ತು ಜನಸಾಮಾನ್ಯರಲ್ಲಿ ತಿಳುವಳಿಕೆ ನೀಡುವ ಕಾರ್ಯವಾಗಬೇಕಿದೆ. ಈ ಹಿನ್ನೆಲೆಯಲ್ಲಿ ಗೋವಾದ ಬೈನಾ ಬೀಚಿನ ವಾಸಿಗಳನ್ನು ಒಕ್ಕಲೆಬ್ಬಿಸುವುದರಲ್ಲಿ ನಿರತವಾಗಿರುವ ಅಲ್ಲಿನ ಸರ್ಕಾರ ತಳೆದ ನಿಲುವು, ಕಾರ್ಯತಂತ್ರ ಸರಿಯಾದುದಲ್ಲ. ನ್ಯಾಯಾಲಯದ ತೀರ್ಪಿಗೆ ಬದ್ಧರಾಗುವ ನೆಪದಲ್ಲಿ ಬೈನಾ ಬೀಚ್‌ನ ಎಲ್ಲ ಜನಸಾಮಾನ್ಯರ ಜೊತೆಗೆ ವೇಶ್ಯೆಯರನ್ನೂ, ಅವರಲ್ಲಿ ಬಹುಪಾಲು ಏಡ್ಸ್ ರೋಗಿಗಳನ್ನು ಅಲ್ಲಿಯೇ ನಿಯಂತ್ರಿಸುವ ಬದಲು ದೂರದ ಊರುಗಳಿಗೆ ಅಟ್ಟುತ್ತಿರುವುದು ನ್ಯಾಯವಾದುದಲ್ಲ.

ಏಡ್ಸ್ ಕಾಯಿಲೆಯನ್ನು ಕುರಿತಂತೆಯೇ ನಮ್ಮ ಜನಮಾನಸದಲ್ಲಿ ಅಡಗಿರುವ ಮೂಢನಂಬಿಕೆ ಅಗಾಧವಾದುದು. ಇತ್ತೀಚೆಗೆ ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮದ ಕುರುಬರನೆಟ್ಟು ಪ್ರದೇಶದಲ್ಲಿ ಅಂಗನವಾಡಿ ಕ್ಷೇತ್ರದಲ್ಲಿ ಸಹಾಯಕಿಯ ಸ್ಥಾನ ತೆರವಾಗಿದ್ದು, ಅದನ್ನು ಸ್ಥಳೀಯ ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳಬೇಕೆಂಬ ಹುನ್ನಾರದಲ್ಲಿದ್ದರು. ಅಲ್ಲಿ ಆ ಊರಿನ ವಿಧವೆಯೊಬ್ಬಳು ನೇಮಕವಾದಾಗ ಅವಳನ್ನು ತೆಗೆದುಹಾಕಲು ಗ್ರಾಮಸ್ಥರು ಹೂಡಿದ ಅಪಪ್ರಚಾರ ಅಸಹ್ಯವಾಗಿತ್ತು. ಅವಳ ಗಂಡ ಏಡ್ಸ್ ಬಂದು ಸತ್ತಿದ್ದ. ಆದ್ದರಿಂದ ಅವಳಿಗೂ ಏಡ್ಸ್ ಬಂದಿರುತ್ತದೆ, ಆದ್ದರಿಂದ ಅವಳು ಮಕ್ಕಳನ್ನು ಬಾಣಂತಿಯರನ್ನು ಮುಟ್ಟಿ ಎಲ್ಲರಿಗೂ ಕಾಯಿಲೆ ತರುತ್ತಾಳೆ ಎಂಬ ಆರೋಪ ಹೊರಿಸಿ ಆ ವಿಧವೆಗೆ ಚಿತ್ರಹಿಂಸೆ ಕೊಟ್ಟರು. ಅಷ್ಟೇ ಅಲ್ಲ ಅಂಗನವಾಡಿ ಕೇಂದ್ರಕ್ಕೆ ಬೀಗ ಜಡಿದರು. ಆಕೆಗೆ ಏಡ್ಸ್ ಇಲ್ಲವೆಂದು ಹೇಳಿ ಅಧಿಕಾರಿಗಳು ಕಛೇರಿಯ ಬಾಗಿಲು ತೆಗೆಸಲು ಹರಸಾಹಸ ಮಾಡಬೇಕಾಯಿತು. ಆದರೂ ತನ್ನದಲ್ಲದ ತಪ್ಪಿಗೆ, ಕಾಯಿಲೆಯೂ ಇಲ್ಲದೆ ಆ ವಿಧವೆ ಅನುಭವಿಸಿದ ಮಾನಸಿಕ ನೋವು ಊಹೆಗೂ ನಿಲುಕದ್ದು. ಇಂತಹ ಸಂದರ್ಭಗಳು 'ಏಡ್ಸ್' ಕಾಯಿಲೆಯನ್ನು ಕುರಿತ ಜಾಗೃತಿಯ ಅಗತ್ಯವನ್ನು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತದೆ.

-ಎನ್. ಗಾಯತ್ರಿ

ಫೆಮಿನೈಸೇಷನ್ ಆಫ್ ಏಡ್ಸ್

ಪೂರ್ಣಿಮಾ ಮಾನೆ 'ಆರೋಗ್ಯ ಮತ್ತು ಲಿಂಗ'ಕ್ಕೆ ಸಂಬಂಧಿಸಿದಂತೆ ಅಂತರರಾಷ್ಟ್ರೀಯ ನೆಲೆಯಲ್ಲಿ ವಿಶೇಷವಾದ ಅನುಭವ ಗಳಿಸಿದವರು. ಜನಸಂಖ್ಯೆ ಮತ್ತು ಸಂತಾನದ ಆರೋಗ್ಯ ಕುರಿತ ಹಲವಾರು ಕಾರ್ಯಕ್ರಮಗಳಲ್ಲಿ ಕೆಲಸ ಮಾಡಿದ ಅನುಭವ ಇವರಿಗಿದೆ. ಇವರ ವಿಶೇಷ ಆಸಕ್ತಿಯ ಕ್ಷೇತ್ರ ಏಡ್ಸ್‌ನ ದುಷ್ಪರಿಣಾಮಗಳು ಮತ್ತು ಅದರ ನಿಯಂತ್ರಣದ ಬಗ್ಗೆ ಭರವಸೆಯ ಪ್ರಯತ್ನಗಳು. ಈಗ ಜಿನೀವಾದಲ್ಲಿರುವ 'ಸೋಷಿಯಲ್ ಮೊಬಿಲೈಸೇಷನ್ ಮತ್ತು ಇನ್‌ಫರ್ಮೇಷನ್' ಕೇಂದ್ರದ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರೊಂದಿಗೆ ಬಾಚಿ ಕಾರ್ಕಿಯಾ ನಡೆಸಿದ ಸಂದರ್ಶನವಿದು

ಪ್ರ : UNAIDS 2004ರ ವರದಿಯಲ್ಲಿ ಗಾಬರಿ ಹುಟ್ಟಿಸುವಂತಹ ವಿಷಯಗಳು ಯಾವುವು?

ಏಡ್ಸ್ ಸ್ತ್ರೀ ಪುರುಷರಿಬ್ಬರಿಗೂ ಬರುವ ಕಾಯಿಲೆಯಾದರೂ, ಈ ಕಾಯಿಲೆಯ ಸ್ತ್ರೀಯಾತ್ಮಕ ಆಯಾಮ ಗಾಬರಿ ಹುಟ್ಟಿಸುತ್ತದೆ. ಸೋಂಕು ತಗುಲಿದವರಲ್ಲಿ ಒಬ್ಬರು ಪುರುಷರಿದ್ದರೆ ಇಬ್ಬರು ಮಹಿಳೆಯರಿರುತ್ತಾರೆ. ಇಬ್ಬರಿಗೂ ದೇಹಕ್ಕೆ ಉಂಟಾಗುವ ತೊಂದರೆಗಳಲ್ಲಿ ವ್ಯತ್ಯಾಸಗಳಿವೆ. ಸ್ತ್ರೀಯರ ದೇಹರಚನೆಯಲ್ಲಿ ಈ ಕಾಯಿಲೆ ತಗಲುವ ಸಾಧ್ಯತೆಗಳು ಹೆಚ್ಚು. ಈ ಕಾಯಿಲೆಯ ನಿಯಂತ್ರಣದ ಬಗ್ಗೆ ಅವರಿಗಿರುವ ತಿಳುವಳಿಕೆಯೂ ಕಡಿಮೆ. ಅವರಿಗೆ ಕಾಂಡೋಮ್ ಯಾವಾಗ ಬಳಸಬೇಕು ಎನ್ನುವುದು ನಿರ್ಧರಿಸುವುದು ಕಷ್ಟ. ಇಷ್ಟಲ್ಲದೆ ತಮ್ಮ ಗಂಡನಿಗೆ ನಿಷ್ಠರಾಗಿರುವ ಹೆಂಡತಿಯರಿಗೂ ಕೂಡ ಈ ಕಾಯಿಲೆ ಬರುತ್ತಿದೆ. ಬಹು ಸಂಬಂಧ ಹೊಂದಿರುವ ಗಂಡಿನಿಂದ ದೂರವಿರಬೇಕೆನಿಸಿದರೂ ಸಾಮಾಜಿಕ ನೀತಿ ನಿಯಮಾವಳಿಗಳ ಬಗ್ಗೆ ನಿಯಂತ್ರಣವೆಲ್ಲಿದೆ ? ಅವರಿಗೆ ಅನುಕೂಲಕರವಾದ ತಂತ್ರಜ್ಞಾನವಿಲ್ಲ. ಹೆಂಗಸರು ಬಳಸುವ ಕಾಂಡೋಮ್ ದುಬಾರಿ. ಅದನ್ನು ಪಡೆಯುವುದು ಮತ್ತು ಬಳಸುವುದೂ ಎರಡೂ ಕಷ್ಟ

ಪ್ರ. : ಈ ಸಮಸ್ಯೆಯನ್ನು ಹೇಗೆ ಎದುರಿಸುತ್ತೀರ?

ವಿಶ್ವ ಸಂಸ್ಥೆಯ ಏಡ್ಸ್ ಕೊಯಿಲೇಷನ್ ಮಹಿಳೆಯರಿಗಾಗಿ ಕೆಲವೊಂದು ಅಂಶಗಳನ್ನು ಒತ್ತಾಯಿಸುತ್ತದೆ: ಮಹಿಳೆಯರ ಮೇಲಿನ ದೌರ್ಜನ್ಯವನ್ನು ತಡೆಗಟ್ಟಲು ಅವರಿಗೆ ವಿದ್ಯಾಭ್ಯಾಸ, ಮಹಿಳೆಯರ ನಿಯಂತ್ರಣಕ್ಕೆ ಅನುಕೂಲವಾಗುವ ತಾಂತ್ರಿಕತೆ, ಆಸ್ತಿಯ ಹಕ್ಕು ಮುಂತಾದವು. 15 ರಿಂದ 24 ವಯಸ್ಸಿನ ಹೆಂಗಸರು ಈ ರೋಗಿಗಳಾಗುವುದರ ಬಗ್ಗೆ ಈ ವರದಿ ತೀವ್ರ ಆತಂಕ ವ್ಯಕ್ತಪಡಿಸುತ್ತದೆ. ವಿಶ್ವದಾದ್ಯಂತ ಹೆಚ್.ಐ.ವಿ. ಸೋಂಕು ತಗಲುವವರಲ್ಲಿ ಅರ್ಧದಷ್ಟು ಮಂದಿ ಈ ವಯಸ್ಸಿನವರು. ಅವರಲ್ಲೂ ಹೆಂಗಸರೇ ಹೆಚ್ಚು. ಭಾರತದಲ್ಲಿ ಹೆಂಗಸರನ್ನು ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ಮಾಡಿಕೊಡಲಾಗುತ್ತದೆ. ಅವರನ್ನು ಅಜ್ಞಾನದಲ್ಲಿ ಇಟ್ಟು ಲೈಂಗಿಕ ಮಾಹಿತಿಗಳನ್ನು ಕೊಡದೆ ಬಲಿಪಶುಗಳನ್ನು ಮಾಡಲಾಗುತ್ತದೆ.

ಪ್ರ: ಇದನ್ನು ಬದಲಾಯಿಸುವುದು ಹೇಗೆ?

ಇದೊಂದು ಪ್ರಚಾರದ ಕೆಲಸವಾಗಬೇಕು. ವಿಶ್ವದಾದ್ಯಂತ ಒಳ್ಳೆಯ ವ್ಯವಸ್ಥೆಯೊಂದು ರೂಪಿತವಾಗುವಂತೆ ಕೆಲಸ ಮಾಡಬೇಕು. ಇವತ್ತು ವಿಶ್ವದಲ್ಲಿ ಯಾವ ದೇಶವೂ ಈ ವಿಷಯದಲ್ಲಿ ಮಾದರಿ ಎನಿಸಿಕೊಂಡಿಲ್ಲ. ಕೆಲವು ಜಾಗಗಳಲ್ಲಿ ಪ್ರಶಂಸನೀಯ ಕೆಲಸಗಳು ನಡೆದಿರಬಹುದಷ್ಟೇ. ಸಮಾಜದಲ್ಲಿ ಸೂಕ್ತರಾದ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು ಈ ಸೋಂಕಿನ ಬಗ್ಗೆ, ಅದರ ನಿವಾರಣೆಯ ಬಗೆಗಿನ ಮಾಹಿತಿಗಳನ್ನು ವಿಶೇಷವಾಗಿ ಹುಡುಗಿಯರಿಗೆ ತಲುಪಿಸಬೇಕಾಗಿದೆ.

ಪ್ರ: ಈ ಹಿನ್ನೆಲೆಯಲ್ಲಿ ಭಾರತದ ಪರಿಸ್ಥಿತಿಯೇನು?

ಒಂದು ದಶಕದ ಹಿಂದಿನ ಸ್ಥಿತಿಗೆ ಹೋಲಿಸಿದರೆ ಇಂದು ಈ ವಿಷಯದ ಬಗ್ಗೆ ಸಾಕಷ್ಟು ಚಿಂತನೆ ಮತ್ತು ಚರ್ಚೆ ಸರ್ಕಾರದ ಹಂತದಲ್ಲೂ ನಡೆಯುತ್ತಿದೆ. ಆದರೆ ಅದನ್ನು ಕ್ರಿಯೆಗೆ ಇಳಿಸುವ ಕೆಲಸ ಇನ್ನೂ ಆಗಬೇಕಿದೆ. 2003ರಲ್ಲಿ ಈ ಕಾಯಿಲೆಯ ಸೋಂಕು ತಗಲಿದವರ ಸಂಖ್ಯೆ 5.1 ಮಿಲಿಯನ್ ಎಂದು ಅಂದಾಜು ಮಾಡಲಾಗಿತ್ತು. ದೊರೆಯುವ ಅಂಕಿ ಸಂಖ್ಯೆಗಳ ಪ್ರಕಾರ ಹೆಚ್.ಐ.ವಿ. ಸೋಂಕು ತಗುಲಿದವರಲ್ಲಿ ಶೇಕಡ 60ರಷ್ಟು ಮಂದಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಸ್ವತಃ ಪರೀಕ್ಷೆಗೆ

ಗುರಿಯಾಗುವ ಮತ್ತು ವೈದ್ಯರ ಮಾರ್ಗದರ್ಶನ ಪಡೆಯಲು ಇಚ್ಛಿಸುವವರ ಸಂಖ್ಯೆ ಹೆಚ್ಚುತ್ತಿದೆ. ಶಾಲೆಗಳಲ್ಲಿ ಕೂಡ ಏಡ್ಸ್ ಕುರಿತಂತೆ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಪ್ರ : ನೀವು ಚಿಕಿತ್ಸೆ ಮತ್ತು ಮುನ್ನೆಚ್ಚರಿಕೆಯ ಕ್ರಮಗಳನ್ನು ಯಾವ ರೀತಿ ನಿರ್ಧರಿಸುತ್ತೀರಿ ?

ಇವೆರಡರ ನಡುವೆ ಇರುವ ವ್ಯತ್ಯಾಸ ಹೇಳುವುದು ಸ್ವಲ್ಪ ಕಷ್ಟ ಇವೆರಡನ್ನೂ ಒಳಗೊಳ್ಳುವಂತೆ, ಚಿಕಿತ್ಸೆ ಕೊಡುವ ಸಂದರ್ಭ ದಲ್ಲೇ ಆ ಅವಕಾಶವನ್ನು ಬಳಸಿಕೊಂಡು ಮುನ್ನೆಚ್ಚರಿಕೆಯ ವಿಧಾನಗಳನ್ನು ಪ್ರಚಾರ ಮಾಡುತ್ತೇವೆ. ಏಡ್ಸ್ ಕೇಂದ್ರಕ್ಕೆ ಔಷಧಿಗಾಗಿ ಜನರು ಬಂದಾಗ ಅವರಲ್ಲಿ ಒಂದು ಭರವಸೆಯಂತೂ ಇರುತ್ತದೆ. ಆಗ ಸಂದೇಶ, ಸಲಹೆ ನೀಡುವುದರೊಂದಿಗೆ ಅವನ್ನು ಕ್ರಿಯೆಗೆ ಗುರಿಪಡಿಸಿ ಕಾಂಡೋಮ್ ಬಳಕೆ, ಶುದ್ಧ ರಕ್ತದ ಅಗತ್ಯ, ಲೈಂಗಿಕ ರೋಗಗಳ ನಿಯಂತ್ರಣ - ಮುಂತಾದವುಗಳ ಬಗ್ಗೆ ಮಾಹಿತಿಯನ್ನು ನೀಡುತ್ತೇವೆ. ಈ ಜಗತ್ತಿನಲ್ಲಿ ಇರುವ ಎಲ್ಲ ರೋಗಿಗಳಿಗೂ ಅಗತ್ಯವಾದಷ್ಟು ಔಷಧಿ ಇಲ್ಲ.

ಪ್ರ : ಈ ಕ್ಷೇತ್ರದಲ್ಲಿ ಔಷಧಿಗಳು ಎಷ್ಟು ಸುಧಾರಿಸಿವೆ ?

ದಿನಕ್ಕೆ ಹದಿನೈದು ಮಾತ್ರೆಗಳನ್ನು ತೆಗೆದುಕೊಳ್ಳುವುದನ್ನು ಈಗ ಆರಕ್ಕೆ ಇಳಿಸಬಹುದಾದ ಹಂತವನ್ನು ನಾವು ತಲುಪಿದ್ದೇವೆ. ಇದರಿಂದ ಔಷಧಿಯ ಅಡ್ಡ ಪರಿಣಾಮಗಳನ್ನು ಸ್ವಲ್ಪವಾದರೂ ತಗ್ಗಿಸಬಹುದಾಗಿದೆ. ಚಿಕಿತ್ಸೆಯನ್ನು ಇಂದು ಬೇಕೆಂದಾಗ ಮೊಟಕು ಮಾಡಬಹುದಾಗಿದೆ. ಔಷಧಿ ಕಂಪನಿಗಳು ಎರಡು ಬೇರೆ ಔಷಧಿ ಗಳನ್ನು ಒಟ್ಟಾಗಿಸಿ ಒಂದು ಮಾತ್ರೆಯನ್ನು ಮಾಡುತ್ತಿದ್ದಾರೆ. ಆದರೂ ಈ ಮಾತ್ರೆಗಳ ಬೆಲೆಯನ್ನು ಸುಧಾರಿಸಬೇಕಾದದ್ದು ಅಷ್ಟೇ ಮುಖ್ಯವಾಗುತ್ತದೆ. ಅದು ವರ್ಷದಿಂದ ವರ್ಷಕ್ಕೆ ಮೂರು ಲಕ್ಷದಿಂದ ಮುನ್ನೂರು ಡಾಲರ್‌ಗೆ ಕಡಿಮೆಯಾಗುತ್ತಿದೆ.

ಪ್ರ : ಏಡ್ಸ್ ಕುರಿತ ಮಾಹಿತಿ ಸಂದೇಶವನ್ನು ನೀಡುವುದು ಸ್ವಲ್ಪ ಕಷ್ಟದ ಕೆಲಸವಲ್ಲವೇ ?

ಏಡ್ಸ್ ವಿಷಯ ಕುರಿತು ಮಾತನಾಡುವುದು ಸಾಮಾಜಿಕವಾಗಿ ಅತ್ಯಂತ ಸೂಕ್ಷ್ಮವಾದ ವಿಷಯ. ಬೇಜವಾಬ್ದಾರಿ ಲೈಂಗಿಕ ಸಂಬಂಧಗಳ ಬಗ್ಗೆ ಒತ್ತು ಕೊಡದೆ ಕಾಂಡೋಮ್‌ಗಳ ಬಳಕೆಯ ಬಗ್ಗೆ ಮಾತನಾಡುವುದು ಅತ್ಯಂತ ಕಠಿಣವಾದ ಕೆಲಸ. ಕೆಲವೊಂದು ನಿಷಿದ್ಧ ಸಂಬಂಧಗಳು ಸಮಾಜದಲ್ಲಿ ಇರುತ್ತವೆ ಎಂಬುದರ ಬಗ್ಗೆ ಜನರಿಗೆ ನಂಬುಗೆ ಬರಿಸುವುದೇ ಒಂದು ಕಷ್ಟದ ಕೆಲಸ. ಸ್ತ್ರೀ-ಪುರುಷರಲ್ಲಿ ಒಂದೇ ಲಿಂಗಕ್ಕೆ ಸೇರಿದವರ ನಡುವೆಯೇ ಲೈಂಗಿಕ ಸಂಬಂಧಗಳು ಇರುತ್ತವೆ, ಎನ್ನುವುದನ್ನು ಜನಕ್ಕೆ ಅರ್ಥಮಾಡಿಸುವುದೇ ಅತ್ಯಂತ ಕಷ್ಟದ ಕೆಲಸ. ನಾವು ಹುಡುಗಿಯರಿಗೆ ಅವರ ದೇಹ ಅಮೂಲ್ಯವಾದದ್ದು, ಸಮಾಜದಲ್ಲಿ ಅವರ ಪಾತ್ರವೇನಿರಬೇಕು ಎಂಬುದನ್ನು ಹೇಳುವಾಗಲೂ ಅವರ ಸಂಗಾತಿಗಳ ಲೈಂಗಿಕ ಚರಿತ್ರೆ ತಿಳಿದು ಕೊಂಡಿರಬೇಕು ಎಂದು ಹೇಳುವುದು ತುಂಬ ಕಷ್ಟವಾಗುತ್ತದೆ.

ಪ್ರ : ಈ ನಿಮ್ಮೆಲ್ಲ ಪ್ರಯತ್ನಗಳಿಂದ ನೀವು ಕಲಿತಿರುವ ಪಾಠವೇನು ?

ಯಾವುದೇ ಪಾಠ ಇದು ಎಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಎರಡನೆಯದಾಗಿ ನೀವು ಜನರಿಂದ ಯಾವುದೇ ರೀತಿಯ ಆಶ್ಚರ್ಯದ, ಕುತೂಹಲದ ಪ್ರತಿಕ್ರಿಯೆಗೆ ಸಿದ್ಧರಿರಬೇಕು. ಜನ ನಿಮ್ಮ ಸಲಹೆ ಸೂಚನೆಗಳನ್ನು ಯಾವ ರೀತಿ ಬೇಕಾದರೂ ತಿರುಚಬಹುದು. ಹತ್ತು ವರ್ಷದ ಹಿಂದೆ ನಾವು ಎಳೆಯರು ವಯಸ್ಕರಿಂದ ಕಲಿಯುವುದು ಹೆಚ್ಚಿದೆ. ಎಳೆಯರಿಗೆ ಹೆಚ್ಚು ಮಾಹಿತಿಗಳು ಬೇಕಿದೆ, ಎಂದು ಕೊಂಡಿದ್ದೆವು. ಆಗ ಅದು 'ಶಿಕ್ಷಣದ ಭಾಗ' ಎಂದೆನಿಸಿಕೊಂಡಿತ್ತು. ಆದರೆ ಈಗ ಶಿಕ್ಷಣದ ಹೊರಗೂ, ಯಾರ ಸಹಾಯವೂ ಇಲ್ಲದೆ ಮಾಹಿತಿ ದೊರಕುತ್ತದೆ. ಮೂರನೆಯದಾಗಿ ಈಗ ನಾವು ಪರ್ಯಾಯ ಸಾಧ್ಯತೆಗಳತ್ತ ನೋಡಬೇಕಾಗಿದೆ. ಇವತ್ತು ದೂರದರ್ಶನವನ್ನು ಗ್ರಾಮೀಣ ಮಹಿಳೆಯರೂ ವ್ಯಾಪಕವಾಗಿ ನೋಡುತ್ತಿದ್ದಾರೆ. ಅಲ್ಲಿ ಅವಳು 'ಏಡ್ಸ್' ಕಾಯಿಲೆಯನ್ನು ಯಾವ ರೀತಿ ವ್ಯಾಖ್ಯಾನಿಸಿಕೊಳ್ಳುತ್ತಾಳೆ, ಎನ್ನುವುದೂ ಮುಖ್ಯ. ಕೊನೆಯದಾಗಿ ಯಾವುದೇ ಬದಲಾವಣೆ, ಅದು ನಡವಳಿಕೆಯದ್ದು ಆಗಿರಬಹುದು, ಅದು ಶಾಶ್ವತವಲ್ಲ. ಆದ್ದರಿಂದ ಪಿಡುಗು ತಗುಲಿದವರನ್ನು ಮುಖ್ಯವಾಗಿ ಕೇಂದ್ರೀಕರಿಸಿ ಕಾರ್ಯಪ್ರವೃತ್ತರಾಗಬೇಕು.

ಇಂದು ನಾವು ಯಶಸ್ಸಿನ ದ್ವೀಪಗಳ ನಡುವೆ ಬದುಕುತ್ತಿದ್ದೇವೆ. ಪ್ರತಿಯೊಬ್ಬ ಮನುಷ್ಯನೂ ಅವನ ಪರಿಸ್ಥಿತಿ ಎಷ್ಟೇ ಹೀನಾಯವಾಗಿದ್ದರೂ, ಪೂರ್ತಿ ಜೀವನ ಸಾಗಿಸಬೇಕೆಂಬ ಭರವಸೆಯ ಆಶಾಕಿರಣದಲ್ಲಿಯೇ ಬದುಕಿರುತ್ತಾನೆ.

ಕೃಪೆ : ಟೈಮ್ಸ್ ಆಫ್ ಇಂಡಿಯಾ

ಕುವೆಂಪುರವರ ಕಾದಂಬರಿಗಳಲ್ಲಿ ಸ್ತ್ರೀ ದರ್ಶನ

- ಎನ್. ಗಾಯತ್ರಿ

ನವೋದಯ ಸಾಹಿತ್ಯ ಸಂದರ್ಭದಲ್ಲಿ ಕುವೆಂಪುರವರದು ಅತ್ಯಂತ ಸಂಕೀರ್ಣಮಯವಾದ, ವೈರುಧ್ಯಗಳಿಂದ ಕೂಡಿದ ವಿಶಿಷ್ಟ ವ್ಯಕ್ತಿತ್ವ. ಅವರು ತಮ್ಮ ಸಮಕಾಲೀನ ಲೇಖಕರುಗಳಿಗಿಂತ ಭಿನ್ನವಾದ ಚರಿತ್ರೆಯ ಸಾಮಾಜಿಕ ಒತ್ತಡಗಳಲ್ಲಿ, ಜಾತಿ ಸಮಾಜದ ಸಂಕೀರ್ಣ ವಾಸ್ತವಗಳಲ್ಲಿ ಬದುಕಿ ಬರೆದವರು. ರೈತಾಪಿ ಕೃಷಿಕ ಕುಟುಂಬ ಶೂದ್ರ ಜನಾಂಗದಿಂದ ಬಂದ ಕುವೆಂಪುರವರಿಗೆ ವಸಾಹತುಶಾಹಿಯಿಂದ ಸಿಕ್ಕ ಇಂಗ್ಲಿಷ್ ಜ್ಞಾನ ಹೊಸ ಬೆಳಕಿಂಡಿ ಯಾಯಿತು. ಈ ಬೆಳಕಿನ ಮೂಲಕ ತಮ್ಮ ಸಮುದಾಯದ ವಿಶಿಷ್ಟ ನೋವು, ನಲಿವುಗಳನ್ನು ಅರ್ಥಮಾಡಿಕೊಂಡು ತಮ್ಮದೇ ಆದರ್ಶದ ಸಮಾನತೆಯ ಲೋಕದ ಕನಸು ಕಂಡವರು. ಅದುವರೆಗೂ ಕನ್ನಡ ಸಾಹಿತ್ಯ ಲೋಕಕ್ಕೆ ಅಲಭ್ಯವಾಗಿದ್ದ ಒಂದು ಹೊಸ ಸಾಂಸ್ಕೃತಿಕ ಅನುಭವವನ್ನು ತೆರೆದುಕೊಟ್ಟರು. ಬ್ರಾಹ್ಮಣೇತರ ಸಂಸ್ಕೃತಿಯಲ್ಲಿನ ಹೆಣ್ಣುಗಳ ಅನುಭವ ಪ್ರಪಂಚವನ್ನು ಪರಿಚಯಿಸಿದರು. ಸುಬ್ಬಮ್ಮ, ಸೀತೆ, ಪೀಂಚಲು, ತಿಮ್ಮಿ, ನಾಗತ್ತೆ, ನಾಗಕ್ಕ, ಅಂತಕ್ಕ, ಕಾವೇರಿಯಂತಹ ವಿಶಿಷ್ಟ ಅನುಭವಗಳ, ವಿಶಿಷ್ಟ ಸಾಧ್ಯತೆಯ ಹೆಣ್ಣುಗಳ ಲೋಕವನ್ನು ಕುವೆಂಪು ಪರಿಚಯಿಸಿದರು.

'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' - ಎರಡೂ ಹೆಸರೇ ಸೂಚಿಸುವಂತೆ ಸ್ತ್ರೀ ಕೇಂದ್ರಿತ, ಕೌಟುಂಬಿಕ ನೆಲೆಯ ಕಾದಂಬರಿಗಳು. ಇಲ್ಲಿನ ಹೆಣ್ಣಿನ ಭಾವನಾ ಪ್ರಪಂಚ ಮತ್ತು ಅನುಭವ ಪ್ರಪಂಚಗಳೆಲ್ಲವೂ ಕೌಟುಂಬಿಕ ಚೌಕಟ್ಟಿನಲ್ಲೇ ಮೂಡಿರುವಂಥವು. ಸ್ವಾತಂತ್ರ್ಯಪೂರ್ವದಲ್ಲಿ ರಚಿತವಾದ 'ಕಾನೂರು ಹೆಗ್ಗಡಿತಿ' ಮತ್ತು ಸ್ವಾತಂತ್ರ್ಯಾ ನಂತರ ರಚಿತವಾದ 'ಮಲೆಗಳಲ್ಲಿ ಮದುಮಗಳು'-ಎರಡೂ ನವೋದಯ ಸಾಹಿತ್ಯ ಪರಂಪರೆಯ ಪ್ರಮುಖ ಲಕ್ಷಣಗಳನ್ನು ಪ್ರತಿನಿಧಿಸುತ್ತವೆ. ವಸಾಹತುಶಾಹಿಯ ವಿರೋಧದ ಜೊತೆಗೇ ಅಂದಿನ ಸಮಾಜದಲ್ಲಿ ಬದುಕಿನ ಆಳದಲ್ಲಿ ವ್ಯಾಪಕವಾಗಿ ಆಕ್ರಮಿಸಿದ್ದ ಪಾಳೇಗಾರಿಕೆ, ಜಮೀನುದಾರಿ ಪದ್ಧತಿ ಹಾಗೂ ಪುರೋಹಿತ ಶಾಹಿಯ ಸಂಕೋಲೆಯೊಳಗೆ ಮಾನವ ಚೇತನ ಉಸಿರು ಗಟ್ಟಿದ್ದನ್ನು ವಿಶಿಷ್ಟ ಕಣ್ಣಿನಿಂದ ಗುರುತಿಸಿದ ಕುವೆಂಪು, ಇವೆಲ್ಲವುಗಳ ಬಿಡುಗಡೆಗೆ ನೂತನ ಸಮನ್ವಯದ ಹಾದಿ ಸೂಚಿಸಿದರು. ರಾಮಕೃಷ್ಣ ಪರಮಹಂಸ, ವಿವೇಕಾನಂದರ ಚಿಂತನೆಗಳ ಹಿನ್ನೆಲೆ, ಗಾಂಧಿ ಯುಗದ ಉದಾರವಾದಿ ಧೋರಣೆ, ಪ್ರೇಮ ಮೀಮಾಂಸೆಯ ಹೊಸ ಕಾವ್ಯ ಬರೆದರು.

ಕಾನೂರು ಹೆಗ್ಗಡಿತಿ

ವಸಾಹತೀಕರಣದ ಅನುಭವದ ಹಿನ್ನೆಲೆಯಲ್ಲಿ ವೈಚಾರಿಕ ಜಾಗೃತಿ, ಸ್ವಸಂಸ್ಕೃತಿಯ ಪ್ರಜ್ಞೆ, ವ್ಯಕ್ತಿತ್ವ ವಿಕಾಸದ ಆಶಯಗಳನ್ನು ಮುಖ್ಯ ವಿಚಾರಧಾರೆಯನ್ನಾಗಿ ಮಾಡಿಕೊಂಡು ರಚಿತವಾದ ಕುವೆಂಪುರವರ 'ಕಾನೂರು ಹೆಗ್ಗಡಿತಿ' ನವೋದಯ ಉತ್ಕರ್ಷದ ಅವಧಿಗೆ ಸೇರುವ ಕೃತಿ. ಸ್ತ್ರೀಕೇಂದ್ರಿತ ವಸ್ತುವುಳ್ಳ ಈ ಕಾದಂಬರಿಯಲ್ಲಿ ಸಂಸ್ಕೃತಿಯ ಜಿಜ್ಞಾಸೆಗೆ ಸ್ತ್ರೀಪಾತ್ರಗಳೇ ಮುಖ್ಯ ವೇದಿಕೆ. ಅಸಂಸ್ಕೃತಿ-ಕುಸಂಸ್ಕೃತಿ-ಸುಸಂಸ್ಕೃತಿಯ ಪ್ರಕ್ರಿಯೆಗಳಿಗೆ ಒಳಗಾಗುವ ಇಲ್ಲಿನ ಸ್ತ್ರೀ ಪಾತ್ರಗಳು ಕುವೆಂಪು ಪರಿಕಲ್ಪನೆಯ ಸಂಸ್ಕೃತಿಯ ವ್ಯಾಖ್ಯಾನಕ್ಕೆ ಮುಖ್ಯ ವಾಹಕರಾಗುತ್ತಾರೆ.

ನಾಗರೀಕತೆ ಮತ್ತು ಅನಾಗರೀಕತೆಗಳ ಬಗ್ಗೆ ಸ್ಪಷ್ಟ ತಿಳುವಳಿಕೆಯಿಂದ ಹೊರಡುವ ಕುವೆಂಪುರವರ ಕಾದಂಬರಿಗಳ ಪಾತ್ರಗಳು ಈ ಎರಡು ವೈಚಾರಿಕ ಹಿನ್ನೆಲೆಗಳಲ್ಲೇ ತಮ್ಮ ಸಂಕೀರ್ಣ ಸ್ವರೂಪಗಳನ್ನು ಅಭಿವ್ಯಕ್ತಿಸುತ್ತವೆ. 'ಕಾನೂರು ಹೆಗ್ಗಡಿತಿ' ಕಾನೂರಿನ ಗೌಡರಾದ ಚಂದ್ರಯ್ಯ ಗೌಡರ ಮೂರನೆಯ ಪತ್ನಿ ಸುಬ್ಬಮ್ಮನನ್ನು ಕೇಂದ್ರವಸ್ತುವಾಗುಳ್ಳ ಕೃತಿ. ಈ ಪಾತ್ರಕ್ಕಿಂತ ಭಿನ್ನವಾದ ನೆಲೆಯಲ್ಲಿ ಚಿತ್ರಿತವಾಗುವ ಇನ್ನೊಂದು ಮುಖ್ಯ ಪಾತ್ರ ಸೀತೆಯದು. ಸೀತೆಯೂ ಕಾನೂರಿನ ಸೊಸೆ, ಆದರೆ ಸೊಸೆಯಾಗದೇ ತೌರಿಗೆ ಹಿಂತಿರುಗಿದ್ದರಿಂದ ಕಾನೂರು ಹೆಗ್ಗಡಿತಿಯಾಗದೇ ಉಳಿತ ಪಾತ್ರ. ಈ ಎರಡೂ ಪಾತ್ರಗಳು ಅನಾಗರೀಕತೆ ಮತ್ತು ನಾಗರೀಕತೆಗಳ ವಿಭಿನ್ನ ನೆಲೆಗಳಲ್ಲಿ ಸಂಕೇತಗಳಾಗುವ ಪಾತ್ರಗಳು.

ಮದುವೆಯಾಗಿ ಕಾನೂರಿನ ಹೆಗ್ಗಡಿತಿಯಾಗಿ ಬರುವ ಸುಬ್ಬಮ್ಮ ಕಾನೂರಿನ ಮನೆಯಲ್ಲಿ ವರ್ತಿಸುವ ಅನಾಗರೀಕ ರೀತಿಗೆ ದಾರಿದ್ರ್ಯದಲ್ಲೇ ಹುಟ್ಟಿ ಬೆಳೆದು, ಅಸಂಸ್ಕೃತರಿಂದ ಪೋಷಿತಳಾಗಿ, ಅವರ ನಡೆ, ನುಡಿ, ಆಚಾರ, ವ್ಯವಹಾರ, ಶೀಲಗಳನ್ನು ಕಲಿತು ಸುಬ್ಬಮ್ಮನಲ್ಲಿ ಸುಸಂಸ್ಕೃತ ಸ್ತ್ರೀಸಹಜವಾದ ಔದಾರ್ಯ, ಗಾಂಭೀರ್ಯ, ನಯ-ವಿನಯ, ಸಂಯಮ, ಸಂಚಲನಗಳು ಸ್ವಲ್ಪವೂ ಇರಲಿಲ್ಲವೆಂಬುದನ್ನು ಮುಖ್ಯ ಸಂಗತಿಯಾಗಿ ಕಾದಂಬರಿಕಾರರು ಕಾಣುತ್ತಾರೆ. ವಸಾಹತುಶಾಹಿ ಸಂಸ್ಕೃತಿಯ ನಾಗರಿಕ ಗುಣಗಳ ಪ್ರಭಾವವಿಲ್ಲದ್ದು ಸಂಸ್ಕೃತಿ ಹೀನ ಲಕ್ಷಣವೆಂದು ಕುವೆಂಪು ಸುಬ್ಬಮ್ಮನಲ್ಲಿ ಕಾಣುತ್ತಾರೆಯೇ ಹೊರತು ಈ ಅನಾಗರಿಕ ಗುಣಗಳು ಸ್ತ್ರೀ ಸಹಜವೆಂಬ ತೀರ್ಮಾನಕ್ಕೆ ಬರದಿರುವ ವೈಚಾರಿಕತೆ ಅವರ ಕೃತಿಯಲ್ಲಿದೆ.

ಕಾನೂರು ಮನೆಗೆ ಹೆಗ್ಗಡಿತಿಯಾಗಿ ಬಂದ ನಂತರ ಅವಳಲ್ಲಿ

ಅದುವರೆಗೂ ಸುಪ್ತವಾಗಿ ಅಡಗಿದ್ದ ಅಹಂಕಾರ, ಛಲ, ದರ್ಪ, ಸ್ವಾರ್ಥಪರತೆ, ದುರಭಿಮಾನ ಮೊದಲಾದ ಕಾಡುಭಾವಗಳು ಭಯಾನಕವಾಗಿ ಹೆಡೆಯೆತ್ತಿ ನಿಲ್ಲುತ್ತವೆ. ದಿನಬೆಳಗಾದರೆ ನಾಗಮ್ಮ ನೊಂದಿಗೆ, ಮನೆಯ ಮಕ್ಕಳೊಂದಿಗೆ ಜಗಳವಾಡುವುದು, ಅಬ್ಬರದ ಮಾತುಗಳನ್ನಾಡಿ ಮನೆಯ ವಾತಾವರಣವನ್ನು ಅಸಹನೀಯಗೊಳಿಸುವುದು ಸುಬ್ಬಮ್ಮನ ಪರಿಪಾಠವಾಗಿತ್ತು. ಆ ಮನೆಯಲ್ಲಿ ಅವಳು ಏಕಾಕಿನಿ. ಸಂಸ್ಕೃತಿ ಮತ್ತು ಬಡತನದಲ್ಲಿ ತನಗೆ ಸರಿಸಮಾನನಾಗಿದ್ದ ಓಬಯ್ಯನನ್ನು 'ಅಣ್ಣ' ಎಂದು ಕರೆಯುತ್ತಾ ಅವನ ಸ್ನೇಹ ಬೆಳೆಸುತ್ತಾಳೆ. ಹಾಗೆಯೇ ಸೇರೆಗಾರರ ಗೆಳತಿ ಗಂಗೆ ಕೂಡ ಸುಬ್ಬಮ್ಮನ ಸ್ನೇಹ ಬೆಳಸುತ್ತಾಳೆ. ಗೆಳತಿಗೆ ದುಷ್ಟ ಸೂಚನೆಗಳನ್ನು ಕೊಡಲು ನಿಸ್ಸೀಮಳಾದ ಗಂಗೆ ತನ್ನ ಮಾಯೆಯ ಬಲೆಯನ್ನು ಸುಬ್ಬಮ್ಮನ ಮೇಲೆ ಬೀಸುತ್ತಾಳೆ. "ಹೀಗೆ ಅಸಂಸ್ಕೃತಿಯು ಕುಸಂಸ್ಕೃತಿಯ ಬಲೆಗೆ ಮೆಲ್ಲ ಮೆಲ್ಲನೆ ತನಗರಿಯದಂತೆಯೇ ಬೀಳುತ್ತಿತ್ತು" ಎನ್ನುವುದು ಕಥಾ ನಿರೂಪಕನ ಅಭಿಪ್ರಾಯ.

ಆದರೆ ಸುಬ್ಬಮ್ಮ ರಾಮಯ್ಯ ಮತ್ತು ಹೂವಯ್ಯರ ಸುಸಂಸ್ಕೃತ ವರ್ತನೆಯನ್ನು ಕಂಡಾಗ ತನ್ನ ಒರಟುತನಕ್ಕೆ ಅಸಹ್ಯ ಪಟ್ಟುಕೊಳ್ಳು ವುದಲ್ಲದೆ ತನ್ನ ನಡತೆಯನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತಾಳೆ. ಹೂವಯ್ಯನ ಗಂಭೀರ ವರ್ತನೆ, ಸುಸಂಸ್ಕೃತ ನಡವಳಿಕೆ ಅವಳಲ್ಲಿ ಗೌರವದ, ಆರಾಧನೆಯ ಭಾವವನ್ನು ಹುಟ್ಟಿಸುತ್ತದೆ. ಸುಬ್ಬಮ್ಮನ ಹೃದಯ ಪರಿವರ್ತನೆ ಹೂವಯ್ಯನ ವ್ಯಕ್ತಿತ್ವವು ಉಂಟುಮಾಡಿದ ಒಂದು ಪವಾಡವಾಗುತ್ತದೆ. ಆದರೆ ಸುಸಂಸ್ಕೃತಿಯ ಪ್ರಕ್ರಿಯೆ ಯೆಡೆಗೆ ಸಾಗಬಹುದಾಗಿದ್ದ ಸುಬ್ಬಮ್ಮನಿಗೆ ಹೂವಯ್ಯನ ಸಾನ್ನಿಧ್ಯ ಅಥವಾ ಸಂಪರ್ಕದ ಅವಕಾಶ ಕ್ರಮೇಣ ಕುಂಠಿತವಾಗುತ್ತದೆ. ಗಂಡನ ಅನುಮಾನ, ಕ್ರೌರ್ಯ ನಿಂದನೆಗೆ ಒಳಗಾಗಿ ಜೀವ ಉಳಿಸಿಕೊಳ್ಳಲು ತವರು ಮನೆಗೆ ಓಡಿಹೋಗಬೇಕಾಗಿ ಬಂದ ಸುಬ್ಬಮ್ಮ ಸುಸಂಸ್ಕೃತಳಾಗಬಹುದಾದ ಅವಕಾಶವನ್ನು ಕಳೆದು ಕೊಳ್ಳುತ್ತಾಳೆ.

ಕಾಯಿಲೆ ಬಿದ್ದ ಗಂಡನನ್ನು ಆದರ್ಶ ಗೃಹಿಣಿಯಂತೆ ಶುಶ್ರೂಷೆ ಮಾಡಿ ನೋಡಿಕೊಂಡು ಗಂಡನ ಮರಣಾನಂತರ ಇಡೀ ಕುಟುಂಬದ ಒಳ ಹೊರಗಿನ ಜವಾಬ್ದಾರಿಯನ್ನು ದಕ್ಷತೆಯಿಂದ ನಡೆಸುವ ಸಾಮರ್ಥ್ಯ ಹೊಂದಿದ್ದ ಸುಬ್ಬಮ್ಮ ಕುಟುಂಬದಲ್ಲಿನ ಒಂಟಿತನ ಮತ್ತು ಹೇರಳ ವಿರಾಮದಿಂದಾಗಿ ಗೆಳೆತನಕ್ಕೆ ಹಂಬಲಿಸುತ್ತಾಳೆ. ಅಂತಹ ಅವಕಾಶಕ್ಕೆ ಕಾದಿದ್ದ ಸೇರೆಗಾರನ ಬಲೆಗೆ ಸಿಲುಕುತ್ತಾಳೆ. ಕಾದಂಬರಿಯ ನಿರೂಪಣೆಯಲ್ಲಿ ಸುಬ್ಬಮ್ಮನ ಈ ವರ್ತನೆಗೆ ಕಾದಂಬರಿಕಾರರು ನಿರೂಪಿಸುವ ಕಾರಣಗಳು : "ಬಡತನದಲ್ಲಿ ಹುಟ್ಟಿ ದುಡಿದಿದ್ದ ಆಕೆಗೆ ಈಗ ವಿರಾಮದಲ್ಲಿ ಮೈ ಕೊಬ್ಬಿತ್ತು. ಸಂಸ್ಕೃತಿಯಿಲ್ಲದ ಮತ್ತು ಸಂಸ್ಕೃತಿಗಾಗಿಯಲ್ಲದ ವಿರಾಮ ನರಕಕ್ಕೆ ದಾರಿ. ಹೆಗ್ಗಡಿತಿಯೆಂಬ ಅಹಂಕಾರವು ನೆತ್ತಿಗೇರಿತ್ತು."

ಸುಬ್ಬಮ್ಮನ ವಿರುದ್ಧ ದಿಕ್ಕಿನಲ್ಲಿ ಸಂಸ್ಕೃತಿಗೆ ಪ್ರತೀಕವಾಗಿ ಚಿತ್ರಿತವಾದ ಸೀತೆಯ ಪಾತ್ರ ಬೆಳವಣಿಗೆಯು ಅಷ್ಟೇ ಕುತೂಹಲ ಕಾರಿಯಾದುದು. ಹೂವಯ್ಯನ ಸಂಪರ್ಕಕ್ಕೆ ಬರುವ ಮುನ್ನ ಒಬ್ಬ ಸಾಮಾನ್ಯ ಹಳ್ಳಿಯ ಹುಡುಗಿಯಾಗಿದ್ದ ಸೀತೆ ಹೂವಯ್ಯನ ಸಂಸ್ಕೃತೀಕರಣದಿಂದ ಸುಸಂಸ್ಕೃತ ತರಳೆಯಾಗಿ ಮಾರ್ಪಾಡಾಗು ತ್ತಾಳೆ. 'ಸ್ಪರ್ಶಮಣಿಯಿಂದ ಕಬ್ಬಿಣ ಚಿನ್ನವಾಗುವುದಂತೆ' - ಅಂತಹ ಪರಿವರ್ತನೆಯನ್ನು ಹೂವಯ್ಯ ಸೀತೆಯ ಬಾಳಿನಲ್ಲಿ ತರುತ್ತಾನೆ. ಕೆಲವೇ ದಿನಗಳ ಹೂವಯ್ಯನ ಸಾನ್ನಿಧ್ಯ ಪ್ರಭಾವದಿಂದ ಸೀತೆಯಲ್ಲಿನ ಗ್ರಾಮ್ಯಜೀವನಕ್ಕೆ ಸಹಜವಾಗಿದ್ದ ಹಲಕೆಲವು ಸ್ಥೂಲಾಂಶಗಳು ಸೂಕ್ಷ್ಮವೂ, ಶುಭ್ರವೂ ಆಗಲು ಸಾಧ್ಯವಾಗುತ್ತದೆ. ತನ್ನ ಮನಸ್ಸು ಬಯಸಿದವನನ್ನು ಮದುವೆಯಾಗಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ತನ್ನದೇ ರೀತಿಯಲ್ಲಿ ಪ್ರತಿಭಟಿಸುವ ಕೆಚ್ಚು ತೋರಿಸುತ್ತಾಳೆ.

ವಿದ್ಯಾಭ್ಯಾಸದಿಂದ ಸುಸಂಸ್ಕೃತಗೊಂಡು ನಾಗರಿಕ ಜೀವನದ ರೀತಿ ನೀತಿಗಳಿಂದ ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದ ಹೂವಯ್ಯನು ಸೀತೆಯನ್ನು ಸಂಸ್ಕೃತೀಕರಣಗೊಳಿಸಲು ಬಳಸುವ ಮಾಧ್ಯಮಗಳು ನವೋದಯ ಸಂದರ್ಭದ ಆಶಯಗಳನ್ನು ಪ್ರತಿನಿಧಿಸುತ್ತವೆ. ಸೀತಾ-ರಾಮ, ನಳ-ದಮಯಂತಿ, ಹರಿಶ್ಚಂದ್ರ- ಚಂದ್ರಮತಿ, ಸಾವಿತ್ರಿ-ಸತ್ಯವಾನರ ಕಥೆಗಳನ್ನು ಸೀತೆಗೆ ಹೇಳಿ ಅವಳ ಮನಸ್ಸಿನಲ್ಲಿ ತಾನು ಹೂವಯ್ಯ ಭಾವನಿಗೆ ದಮಯಂತಿ ಯಾಗುತ್ತೇನೆ, ಚಂದ್ರಮತಿಯಾಗುತ್ತೇನೆ, ಸಾವಿತ್ರಿಯಾಗುತ್ತೇನೆ ; ನಿಜವಾಗಿಯೂ ತನ್ನ ಹೆಸರಿಗೆ ಅನ್ವರ್ಥವಾಗಿ ಸೀತೆಯೇ ಆಗುತ್ತೇನೆ, ಎಂದು ಸಂಭ್ರಮಿಸುತ್ತಾಳೆ. ಸೀತೆಯು ಬದುಕುತ್ತಿರುವ ಪರಿಸ್ಥಿತಿಯಲ್ಲಿನ ಬದಲಾವಣೆಯಿಂದಾಗಿ ಅವಳು ದಮಯಂತಿ, ಚಂದ್ರಮತಿ, ಸಾವಿತ್ರಿಯಾಗುವುದು ಅಸಾಧ್ಯವೆನಿಸಿದಾಗ ತನ್ನ ಮನಸ್ಸೊಪ್ಪಿದವನನ್ನು ಮದುವೆಯಾಗಿ ಬಾಳುವುದನ್ನು ಸಹಿಸಲಾರದೆ ತನ್ನದೇ ರೀತಿಯಲ್ಲಿ ಪ್ರತಿಭಟಿಸುತ್ತಾಳೆ. ಹೊಸ ಸಮಾಜ, ಹೊಸ ಸಂಸ್ಕೃತಿಯೊಂದರ ನಿರ್ಮಾಣಕ್ಕೆ ಹೂವಯ್ಯ ನೊಡನೆ ಸೀತೆಯೂ ಭಾಗಿಯಾಗುತ್ತಾಳೆ. 'ಮಹಿಳೆಯರಲ್ಲಿ ತಪಸ್ವಿನಿಯ ಸ್ಥಾನಮಾನ, ಗೌರವಗಳಿಗೆ ಪಾತ್ರಳಾಗಿದ್ದ ಸೀತೆಯ ಪ್ರಭಾವ ಸದ್ದುಗದ್ದಲವಿಲ್ಲದೆ ಕೆಲಸ ಮಾಡಿತ್ತು.'

ಹೆಣ್ಣು ಅಧೀನತೆಯಿಂದ ಅಧಿಕಾರದ ನೆಲೆಯತ್ತ ಸಾಗುವ ಸಾಮಾಜಿಕ ಪ್ರಕ್ರಿಯೆಗೆ ಸುಬ್ಬಮ್ಮನ ಪಾತ್ರವನ್ನು ಅಧೀನತೆಯಿಂತ ಸಮಾನತೆಗೆ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಗೆ ಸೀತೆಯ ಪಾತ್ರವನ್ನು ನಿದರ್ಶನ ಪಾತ್ರವಾಗಿ ನೋಡಬಹುದು. ಮದುವೆಯ ನಂತರ ಸುಬ್ಬಮ್ಮ ತನ್ನ ಯೌವ್ವನ ಮತ್ತು ಸ್ಥಾನದ ಅಧಿಕಾರದ ಬಲದಿಂದ ಕುಟುಂಬದಲ್ಲಿ ಉಳಿದವರನ್ನು ದರ್ಪದಿಂದ ನಿಯಂತ್ರಿಸಲು ಪ್ರಯತ್ನಿಸುತ್ತಾಳೆ. 'ಚಂದ್ರಯ್ಯ ಗೌಡರ ಹೆಂಡತಿ ಚಂದ್ರಯ್ಯ ಗೌಡರೇ ಆಗಿಬಿಟ್ಟಿದ್ದಾರಂತೆ !' ಎಂದು ಜನರು ಬೆಕ್ಕಸ ಬೆರಗಾಗು

ವಂತೆ ಇಡೀ ಕುಟುಂಬದ ಸೂತ್ರ ಹಿಡಿದವಳು ಹೆಗ್ಗಡಿತಿ ಸುಬ್ಬಮ್ಮ. ಇಂತಹ ಸುಬ್ಬಮ್ಮನ ಹೋರಾಟ ಮತ್ತು ಅಧಿಕಾರಗಳಿಸುವಿಕೆ ಕಾದಂಬರಿಯಲ್ಲಿ ವಿಜಯದ ಸಂಕೇತವಾಗಿದೆಯೇ ಎಂದರೆ ಹಾಗೆನಿಸುವುದಿಲ್ಲ. ಮೊದಲನೆಯದಾಗಿ ಚಂದ್ರಯ್ಯ ಗೌಡರಂತೆ ಅಧಿಕಾರದ ವೈಭವವನ್ನು ಮೆರೆದರೂ ಅವಳನ್ನು ಲೈಂಗಿಕವಾಗಿ ಶೋಷಿಸುವ ನೆಲೆಯಲ್ಲಿ ಸೇರೆಗಾರ ಮತ್ತು ಅವಳ ಆಸ್ತಿಯನ್ನು ಲಪಟಾಯಿಸಲು ಹೊಂಚುಹಾಕುವ ಗಂಗೆ, ಇಬ್ಬರೂ ಶೋಷಕ ಶಕ್ತಿಗಳಾಗಿ ಮೆರೆಯುತ್ತಾರೆ.

ಅಧೀನತೆಯಿಂದ ಸಮಾನತೆಯೆಡೆಗೆ ಸಾಗುವ ಸಾಂಸ್ಕೃತಿಕ ಪ್ರಕ್ರಿಯೆಯ ಸಂಕೇತವಾಗಿ ಸೀತೆಯ ಪಾತ್ರದ ಬೆಳವಣಿಗೆ ಕಾದಂಬರಿಯಲ್ಲಿ ಮೂಡಿಬಂದಿದೆ. ಸಂಪ್ರದಾಯ, ಮೂಢ ನಂಬಿಕೆ, ಅನಕ್ಷರತೆಯ ವಲಯದಿಂದ ಅಕ್ಷರಜ್ಞಾನ, ವೈಚಾರಿಕ ಜಾಗೃತಿ, ಸುಸಂಸ್ಕೃತ ಅಭಿರುಚಿಗಳ ಬೌದ್ಧಿಕ ಜಗತ್ತಿಗೆ ಸೀತೆ ಹೂವಯ್ಯನ ಪ್ರಭಾವದಿಂದಾಗಿ ತೆರೆದುಕೊಳ್ಳುತ್ತಾಳೆ. ಹೂವಯ್ಯನ ಗ್ರಾಮ ಸುಧಾರಣಾ ಕಾರ್ಯಗಳಲ್ಲಿ ಸಂಗಾತಿ ಯಾಗಿರಲು ಮನಸ್ಸು ಮಾಡಿ ಸೀತೆ ಜೀವನವನ್ನು ಸಂನ್ಯಾಸಿನಿ ಯಂತೆ ಕಳೆಯುತ್ತಾಳೆ. ಮಲೆನಾಡಿಗೆ ನವಜೀವನದ ರೀತಿ, ನೀತಿಗಳು, ಆಕಾಂಕ್ಷೆಗಳು ಉದಯಿಸಲು ಹೂವಯ್ಯನ ಪ್ರಭಾವ ಕಾರಣವಾಗಿದ್ದಷ್ಟೇ ಮಹಿಳೆಯರಲ್ಲಿ ತಪಸ್ವಿನಿಯ ಸ್ಥಾನ, ಮಾನ ಗೌರವಗಳಿಗೆ ಪಾತ್ರಳಾಗಿದ್ದ ಸೀತೆಯ ಪ್ರಭಾವವೂ ಸದ್ದು ಗದ್ದಲವಿಲ್ಲದೆ ಕೆಲಸಮಾಡಿದೆ.

ಮಲೆಗಳಲ್ಲಿ ಮದುಮಗಳು

ಹೆಣ್ಣು-ಗಂಡಿನ ನಡುವಿನ ಪ್ರೇಮದ ಶುದ್ಧತೆ ಮತ್ತು ಅಮರತೆಯನ್ನು ಸಾಧಿಸುವ ಉದ್ದೇಶವನ್ನು ಈ ಕಾದಂಬರಿಯ ಸೃಷ್ಟಿಯಲ್ಲಿ ಅಭಿವ್ಯಕ್ತಿಸಿರುವ ಕುವೆಂಪುರವರು ವಿಶೇಷವಾಗಿ ವಿವಾಹ ಸಂಸ್ಥೆಯ ಹಲವಾರು ಮುಖಗಳನ್ನು, ಹಲವಾರು ಸ್ತರಗಳಲ್ಲಿ ಇಲ್ಲಿ ವಿಶ್ಲೇಷಣೆಗೆ ಗುರಿಮಾಡುತ್ತಾರೆ. ಹೆಣ್ಣು-ಗಂಡು ಗಳ ನಡುವಿನ ಪ್ರೇಮ ಕುವೆಂಪುರವವ ಲೇಖನಿಯಲ್ಲಿ ದೈವಿಕ ನೆಲೆಗೆ ಏರುತ್ತದೆ. ಮಲೆನಾಡಿದ ವಿವಿಧ ಸ್ತರಗಳಿಗೆ ಸೇರಿದ ಮದುಮಕ್ಕಳ ಪ್ರೇಮಮಯ ಬದುಕು, ಅದ್ಕಕಾಗಿ ನಡೆಸುವ ಹೋರಾಟ ಮುಂತಾದ ವಿಷಯಗಳು ಇದರಲ್ಲಿದೆ.

ಇಲ್ಲಿನ ಕುಟುಂಬಗಳಲ್ಲಿ ಹೆಣ್ಣು ತಾಯಿ ಮತ್ತು ಮಗಳಾಗಿ ನಿರ್ವಹಿಸುವ ಪಾತ್ರಗಳಲ್ಲಿ ಭಿನ್ನ ಸ್ತರಗಳಿವೆ. ಮಗಳಿಗೆ ತಾನು ಯಾರನ್ನು ಮದುವೆಯಾಗಬೇಕು ಎಂದು ನಿಶ್ಚಯಿಸುವ ಆಯ್ಕೆಯ ಸ್ವಾತಂತ್ರ್ಯವು ಆ ಸಮಾಜದ ಹಳ್ಳಿಯ ಗೌಡರದೇ ಆಗಿದೆ. ಹಾಗಿರುವಾಗ ತಾನು ಮೆಚ್ಚಿದ ಗುತ್ತಿಯನ್ನು ಮದುವೆಯಾಗ ಲೆಂದು ಮನೆಬಿಟ್ಟು ಓಡಿ ಹೋದ ತಿಮ್ಮಿಗೆ ಶಿಕ್ಷೆಯ ರೂಪದಲ್ಲಿ ಅವಳ ಅಣ್ಣನಿಗೆ ಹೊಡೆತ ಬೀಳುತ್ತದೆ. ತಂದೆಯ ಕಣ್ಣೆದುರಿನಲ್ಲೇ ಮಗನಿಗೆ ಸಾಯುವಂತೆ ಹುಣಿಸೇಬರಲು ತೆಗೆದು ಹೊಡೆಯುತ್ತಿದ್ದರೂ ಹೊಡೆಯಬೇಡಿರೆಂದು ಆರ್ತನಾಗಿ ಕೇಳಿ ಕೊಳ್ಳುವುದನ್ನು ಬಿಟ್ಟು ಮತ್ತೇನೂ ಮಾಡಲು ದೊಡ್ಡ ಬೀರನಿಗೆ ಸಾಧ್ಯವಾಗುವುದಿಲ್ಲ. ಆದರೆ ತಾಯಿ ಸೇಸಿಯಾದರೋ ಹೊಡೆತ ತಿನ್ನುತ್ತಿದ್ದ ಮಗನನ್ನು ನೋಡುತ್ತಲೇ ಎದೆ ಬಡಿದುಕೊಳ್ಳುತ್ತಾ ಬಂದು ಇಜಾರದ ಸಾಬಿಯ ಕೈಯಲ್ಲಿದ್ದ ಹುಣಿಸೇ ಬರಲನ್ನು ಕಿತ್ತೆಸೆದು, ಅವನನ್ನು ತಳ್ಳಿ ತಲೆ ಜೋಲುತ್ತಿದ್ದ ತನ್ನ ಮಗನನ್ನು ಆತುಕೊಳ್ಳುತ್ತಾಳೆ. ಸೇಸಿಯ ಆ ಕೃತ್ಯ ಇಜಾರಸಾಬಿಗೆ ಗೌಡರ ಆಜ್ಞೆಯನ್ನು ಮರೆಸಿ ಸೇಸಿಯ ಮಾತಿಲ್ಲದ ಆಣತಿಗೆ ಒಳಗಾಗುವಂತೆ ಮಾಡಿ ಸಣ್ಣ ಬೀರನಿಗೆ ಕಟ್ಟಿದ್ದ ಹಗ್ಗಗಳನ್ನು ಬಿಚ್ಚಿ ಹಾಕುತ್ತಾನೆ. ಸೇಸಿಗೆ ಈ ಕ್ಷಣದಲ್ಲಿ ಒದಗಿ ಬಂದ ಮಾಂತ್ರಿಕ ಶಕ್ತಿ ಯಾವುದು ? ಕಾದಂಬರಿಕಾರರ ಮಾತಿನಲ್ಲೇ ಹೇಳುವುದಾದರೆ, "ಹೊಲೆಯಳಾದರೂ, ಬಡವಳಾದರೂ ಸಂಕಟತಪ್ತ ತಾಯ್ತನ ಎಂತಹ ಅಲ್ಪ ಸ್ತ್ರೀಯನ್ನಾದರೂ ಭೂಮಪಟಕ್ಕೇರಿಸಿ ಬಿಡುತ್ತದೆಯೋ ಏನೋ ಎಂಬಂತೆ, ಅವಳ ಮಾತೃಜನ್ಯ ಕ್ರೋಧದ ಸಾನ್ನಿಧ್ಯ ಭೀಷಣೆಗೆ ಕ್ಷಣ ಮಾತ್ರ ಭಿತ ಚೇತಸನಾದನು, ಇಜಾರದ ಸಾಬಿ" ಎನ್ನುತ್ತಾರೆ. ಗೌಡರನ್ನು ಕಂಡರೆ ನೂರು ಮಾರು ಹೆದರಿ ಕುಗ್ಗಿ ಹೋಗುತ್ತಿದ್ದ ಸೇಸಿಯ ಈ ಮಾತೃತ್ವ ಶಕ್ತಿ ಕುವೆಂಪು ಆದರ್ಶೀಕರಲೆತ್ನಿಸುವ ಮೌಲ್ಯವೂ ಆಗಿದೆ.

ಭಾರತದ ಶ್ರೇಣೀಕೃತ ಸಮಾಜದ ಎಲ್ಲ ವೈಪರೀತ್ಯಗಳನ್ನು ಕುವೆಂಪುರವರ ಎರಡೂ ಕಾದಂಬರಿಗಳೂ ಚಿತ್ರಿಸುತ್ತವೆ. ಇಲ್ಲಿ ವಿವಾಹ ಸಂಸ್ಥೆಯ ಬಗ್ಗೆ ವಿಭಿನ್ನ ಜಾತಿಗಳ ನಡುವಿನ ಆಚಾರ, ವಿಚಾರ, ನಂಬಿಕೆಗಳ ಮೂಲಕ ಹೆಣ್ಣಿನ ಸ್ಥಾನಮಾನ ಪ್ರಕಟ ವಾಗುತ್ತಾ ಹೋಗುತ್ತದೆ. ನೆರೆಮನೆಯವರು ಮಗಳಿಗೆ ಮದುವೆಯ ವಯಸ್ಸು ಮೀರಿ ಹೋಯಿತೆಂದು ಹೇಳುತ್ತಿದ್ದರೂ ಸುಬ್ಬಮ್ಮ ಹೆಗ್ಗಡೆಯವರಿಗೆ ಹಾಗೇನೂ ತೋರುತ್ತಿರಲಿಲ್ಲ. ಅವರು ಹೇಳುತ್ತಾರೆ : "ಮದುವೆಯ ವಯಸ್ಸು ಮೀರುವುದೆಂದರೆ ಅರ್ಥ ಏನು ? ಅವಳೇನು ಹಾರುವ ಮನೆಯ ಹೆಣ್ಣೆ ? ಮದುವೆ ಯಾಗುವುದಕ್ಕೆ ಮೊದಲೇ ದೊಡ್ಡವಳಾಗಿಬಿಟ್ಟರೆ ಕಾಡಿಗಟ್ಟ ಬೇಕೆಂಬ ಹೆದರಿಕೆಯೇನು ತಮಗೆ ?"- ಹೀಗೆ ಬ್ರಾಹ್ಮಣ ಮಹಿಳೆಗೆ ಇರಬಹುದಾದ ಸಾಮಾಜಿಕ ಕಟ್ಟುಪಾಡಿನಿಂದ ಶೂದ್ರ ಮಹಿಳೆ ವಿಮುಕ್ತಳಾಗಿದ್ದಳು.

ಆದರೂ ಕೆಳಜಾತಿಯ ಹೆಣ್ಣು - ಗಂಡುಗಳಿಗೆ ತಮ್ಮ ಮನಸ್ಸಿಗೆ ಬಂದವರನ್ನು ಮದುವೆಯಾಗಲು ಸ್ವಾತಂತ್ರ್ಯವೆಲ್ಲಿತ್ತು?

ಒಡೆಯ ಮತ್ತು ಜೀತದಾಳು ಸಂಬಂಧದಲ್ಲಿ ಹೆತ್ತ ತಂದೆ ತಾಯಿಗಳಿಗೂ ತಮ್ಮ ಮಕ್ಕಳನ್ನು ತಮಗಿಷ್ಟ ಬಂದವರಿಗೆ ಮದುವೆ ಮಾಡಿಕೊಡಲು ಸ್ವಾತಂತ್ರ್ಯವಿರಲಿಲ್ಲ. ಒಂದು ಕೇರಿಯ ಗಂಡನ್ನು

ಆ ಕೇರಿಯ ಹೆಣ್ಣೇ ಮದುವೆಮಾಡಿಕೊಳ್ಳಬೇಕಿತ್ತು. ಅಪ್ಪಿ ತಪ್ಪಿ ಒಡೆಯರ ಇಚ್ಛೆಯನ್ನು ಮದುಮಕ್ಕಳು ಮೀರಿದರೆ ಕೂಡಲೇ ಆ ಹೆಣ್ಣುಮಕ್ಕಳನ್ನು ಎಳೆದು ತರಿಸಿ ತಾಳಿ ಕೀಳಿಸಿ ಮತ್ತೊಂದು ಮದುವೆ ಮಾಡಿಬಿಡುತ್ತಿದ್ದರು. ಕೆಳಜಾತಿಯವರಿಗೆ ಒಲವು, ಅಕ್ಕರೆ ಎನ್ನುವುದೇನಿದ್ದರೂ ಒಡೆಯರ ಲಾಭದ ಒಳಗೇ ಇರಬೇಕಾದ್ದರಿಂದ ಮಾವೀಯತೆಯೆನ್ನುವುದು ಇಂತಹ ವ್ಯವಸ್ಥೆಯಲ್ಲಿ ಮರೀಚಿಕೆಯೇ ! ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪರಸ್ಪರ ಮದುವೆಯಾಗಲಿಚ್ಛಿಸಿದ ಬೆಟ್ಟಳ್ಳಿಯ ತಿಮ್ಮಿ ಸಿಂಬಾವಿಯ ಗುತ್ತಿ ವ್ಯವಸ್ಥೆಯನ್ನು ಪ್ರತಿಭಟಿಸಿ ತಮ್ಮ ಊರುಗಳನ್ನೇ ಬಿಟ್ಟು ಪಲಾಯನ ಮಾಡುವುದೂ ಕೂಡ ಹೋರಾಟವೇ ! ಪರಸ್ಪರ ಪ್ರೀತಿಸಿ ಮದುವೆಯಾಗಲು ತಮ್ಮವರನ್ನೆಲ್ಲಾ ಬಿಟ್ಟು ಹೊರಡುವ ಈ ಜೋಡಿಗಳು ತಮ್ಮಂತೆಯೇ ಪರಸ್ಪರ ಪ್ರೀತಿಸಿ ಮದುವೆಯಾಗ ಲಿಚ್ಛಿಸುವ ಮೇಲ್ಜಾತೀಯ ಚಿನ್ನಮ್ಮ ಮತ್ತು ಮುಕುಂದಯ್ಯನಿಗೂ ತಪ್ಪಿಸಿಕೊಂಡು ಹೋಗಲು ನೆರವಾಗುತ್ತಾರೆ.

ಭಾರತೀಯ ಸಂಸ್ಕೃತಿಯ 'ಪಾವಿತ್ರ್ಯನಾಶ'ಕ್ಕೆ ಅನ್ಯ ಧರ್ಮಗಳ ಆಕ್ರಮಣವೇ ಮುಖ್ಯ ಕಾರಣವೆಂದು ಭಾವಿಸಿದ್ದ ಕುವೆಂಪು, ವಸೂಲಿ ಸಾಬರನ್ನು, ಕ್ರೈಸ್ತಪಾದ್ರಿಗಳನ್ನು ಸಂಸ್ಕೃತಿ ವಿನಾಶದ ಬೀಜಗಳಾಗಿ ಭಾವಿಸುತ್ತಾರೆ. ಅವರಿಗೆ ಆದರ್ಶ ಪಾತ್ರವಾದ ಮುಕುಂದಯ್ಯನಿಗೆ ಎದುರಾಗಿ ದೇವಯ್ಯನಿದ್ದಾನೆ. ದೇವಯ್ಯ ಕ್ರೈಸ್ತಮತದ ನಂಬಿಕೆ, ಆಚರಣೆಗಳ ವಾಹಕನಾಗಿ ಬರುತ್ತಾನೆ. ಸಂಸಾರಸ್ಥನಾದ ಈತನ ಹೊಣೆಗೇಡಿತನದಿಂದ ಕಾವೇರಿಯ ದುರಂತ ಸಂಭವಿಸುತ್ತದೆ. ಕ್ರೈಸ್ತಧರ್ಮದ ಆಕರ್ಷಕ ಸೆಳವಿಗೆ ಒಲಿದಿದ್ದ ಮುಗ್ಧ ಕಾವೇರಿ ವಸೂಲಿ ಸಾಬರುಗಳ ಪೈಶಾಚತನಕ್ಕೆ ಬಲಿಯಾಗಿ ದುರಂತಕ್ಕೀಡಾಗುತ್ತಾಳೆ. ಕಾವೇರಿಯ ಸಾವು ಕಾದಂಬರಿಯಲ್ಲಿ ಅನ್ಯಧರ್ಮದ ಆಕ್ರಮಣದಿಂದ ಉಂಟಾಗುವ ದುರಂತತೆಯ ವಿಷಾದ ಛಾಯೆಯಾಗುತ್ತದೆ.

ಇಲ್ಲಿ ಅನ್ಯಮತದ ಪ್ರಭಾವ ಮತ್ತು ಸಂಸ್ಕೃತಿಗೆ ಪ್ರತಿಭಟನೆ ಬಂದದ್ದು ಮೊದಲು ಮಹಿಳೆಯರಿಂದಲೇ. ಸಿಂಧುವಳ್ಳಿ ಚಿನ್ನಪ್ಪಗೌಡ ಕ್ರೈಸ್ತಮತಕ್ಕೆ ಸೇರಿದ್ದನ್ನು ಕೇಳಿ ಜುಗುಪ್ಸೆಗೊಂಡ ಅವನ ಹೆಂಡತಿ ಭಾವಿಗೆ ಹಾರಿ ಪ್ರಾಣ ಬಿಡುತ್ತಾಳೆ. ದೇವಯ್ಯಗೌಡನ ಹೆಂಡತಿ ದೇವಮ್ಮ ತನ್ನ ಗಂಡನ ಎಲ್ಲ ಆಕ್ಷೇಪಣೀಯ ವರ್ತನೆಗಳನ್ನು ಕ್ಷಮಿಸಲು ಸಿದ್ಧ; ಆದರೆ ಆತನು ಮತಾಂತರಗೊಳ್ಳುವುದನ್ನು ಮಾತ್ರ ಅವಳು ಒಪ್ಪಲು ಸಿದ್ಧಳಿಲ್ಲ. ಗಂಡನು ಮತಾಂತರ ಹೊಂದುವುದಕ್ಕೆ ಮುನ್ನವೇ ತನ್ನ ಶಿಶುವಿ ನೊಡನೆ ಮೃತ್ಯುವಿಗೆ ಮೊರೆಹೋಗುವುದು ಶ್ರೇಯಸ್ಕರವೆಂದು ಅವಳು ಭಾವಿಸುತ್ತಾಳೆ.

ಪಾದ್ರಿಗಳ ಮತಾಂತರ ಕ್ರಿಯೆಗೆ ಎಷ್ಟೇ ವಿರೋಧಗಳು ಕಾದಂಬರಿಯ ಒಡಲಿನಲ್ಲಿ ಕಂಡು ಬಂದರೂ ಮಲೆನಾಡಿನ ಜನಜೀವನವು ಇಂಗ್ಲಿಷ್ ಸಂಸ್ಕೃತಿಯ ಪ್ರಭಾವವನ್ನು ತಪ್ಪಿಸಿ ಕೊಳ್ಳುವಂತಿರಲಿಲ್ಲ. ಕ್ರೈಸ್ತಪಾದ್ರಿಗಳು ಸ್ವಾರ್ಥ ದೃಷ್ಟಿಯಿಂದಲೇ ಮೂಡಿದ್ದರೂ ಅವರ ದೆಸೆಯಿಂದ ನಿರ್ಮಾಣವಾದ ಮಂದಗದ್ದೆಯ ಹೆರಿಗೆ ಆಸ್ಪತ್ರೆಯು ಮಲೇರಿಯಾದಿಂದ ನರಳುತ್ತಿದ್ದ ಮತ್ತು ಹೆರಿಗೆ-ಬಾಣಂತನದಲ್ಲಿ ಸಾವನ್ನಪ್ಪುತ್ತಿದ್ದ ಹಲವಾರು ತರುಣ ವಯಸ್ಸಿನ ಮಾತೆಯರ ಜೀವ ಉಳಿಸಿತ್ತು. ಕೂಲಿ ಮಠಗಳ ಬದಲಿಗೆ ಆರಂಭವಾದ ಇಂಗ್ಲಿಷ್ ಶಾಲೆಗಳು ಜನಜೀವನದ ಬದಲಾವಣೆಗೆ ಕಾರಣವಾದವು. ಹೆಂಗಸರು ಮುಟ್ಟು, ಬಾಣಂತನಕ್ಕೆ ಸಂಬಂಧಪಟ್ಟ ಪದ್ಧತಿಗಳನ್ನು ದೇವಯ್ಯ ವಿಡಂಬಿಸುವುದು ಕ್ರೈಸ್ತ ಮಹಿಳೆಯರ ನಿದರ್ಶನಗಳ ಸಹಾಯದಿಂದಲೇ.

ಕ್ರೈಸ್ತ ಪಾದ್ರಿಯಾದರೋ ಶ್ರೀಮಂತ ಒಕ್ಕಲಿಗ ಗೌಡನೊಬ್ಬನನ್ನು ಮತಾಂತರಿಸುವ ಮೂಲಕ ತನ್ನ ಬಡ್ತಿಯ ಕನಸು ಕಾಣುತ್ತಾನೆ. ಇದಕ್ಕಾಗಿ ತನ್ನ ಮಗಳು ದೇವಯ್ಯನೊಂದಿಗೆ ಸರಸದಿಂದಿರುವುದು, ದೇಹ ಸಂಬಂಧ ಬೆಳೆಸುವುದು ಅವನಿಗೆ ವಿಪರೀತರಾಗಿ ಕಾಣಿಸುವುದಿಲ್ಲ. ಇದೇ ನೆಪ ಮಾಡಿ ದೇವಯ್ಯನನ್ನು ಕ್ರಿಸ್ತನ ಜಾತಿಗೆ ಸೇರಲು ಬಲವಂತ ಮಾಡುತ್ತಾನೆ. ಕ್ರೈಸ್ತ ಮತವು ಇಬ್ಬರು ಹೆಂಡಿರನ್ನು ಎಂದೂ ಸಮ್ಮತಿಸುವುದಿಲ್ಲ ವಾದ್ದರಿಂದ ಮೊದಲ ಹೆಂಡತಿಯನ್ನು ಕಾನೂನು ಬದ್ಧವಾಗಿ ಡೈವೋರ್ಸ್ ಮಾಡಲು ಸೂಚಿಸುತ್ತಾನೆ. ವಿವಾಹ ವಿಚ್ಛೇದನದ ಕಲ್ಪನೆಯನ್ನು ಕುವೆಂಪು ಮಲೆನಾಡಿನ ಪರಿಸರದಲ್ಲಿ ಮೊದಲು ಪರಿಚಯಿಸುತ್ತಾರೆ.

ಗಂಡು ಹೆಣ್ಣುಗಳು ಪರಸ್ಪರ ಪ್ರೀತಿಸಿ ಮದುವೆಯಾಗುವುದು ಕ್ರಿಸ್ತರ ಜಾತಿಯ ಪದ್ಧತಿಯೆಂದು ಸುಬ್ಬಣ್ಣ ಹೆಗ್ಗಡೆಯವರು ಹೇಳುವುದನ್ನು ಕೇಳಿಸಿಕೊಂಡ ಕಾವೇರಿ ಆ ಮತದ ಬಗ್ಗೆ ಅಭಿಮಾನ ಬೆಳೆಸಿಕೊಳ್ಳುತ್ತಾಳೆ. ದೇವಯ್ಯಗೌಡರು ಕಿಲಸ್ತರ ಜಾತಿಗೆ ಸೇರಿದರೆ ತಾನೂ ಸೇರುತ್ತೇನೆ ಮತ್ತು ಆ ಜಾತಿಯ ಪದ್ಧತಿಯಂತೆ ಉಂಗುರ ತೊಡಿಸಿದರೆ ಸಾಕು, ಮದುವೆಯಾದಂತೆ ಎಂಬ ಆಚರಣೆಯ ಬಗ್ಗೆ ಕಾವೇರಿ ಹಿಗ್ಗುತಾಳೆ.

ಹೀಗೆ ನವೋದಯ ಸಾಹಿತ್ಯ ಸಂದರ್ಭದಲ್ಲಿ ಕುವೆಂಪು ವಸಾಹತುಶಾಹಿಗೆ ಪ್ರತಿಕ್ರಿಯಿಸಿದ ರೀತಿ ಮತ್ತು ಈ ನೆಲದ ಚರಿತ್ರೆಗೆ ಸ್ಪಂದಿಸಿದ ರೀತಿ ಹಾಗೂ ಅದರ ನೆರಳಲ್ಲಿ ಮೂಡಿಬಂದ ಭಾರತೀಯ ಹೆಣ್ಣಿನ ಚಿತ್ರವನ್ನು ಅವರ ಎರಡೂ ಕಾದಂಬರಿಗಳಲ್ಲಿ ಕಾಣಬಹುದಾಗಿದೆ.

ಕುವೆಂಪು ಶತಮಾನೋತ್ಸವದ ಸಂದರ್ಭದ ನೆನಪಿಗೆಂದು ಈ ಲೇಖನ

ಏಕ ಪತ್ನಿ ಸಂಬಂಧದ ಮಹಿಳೆಯರೂ ಕೂಡ ಏಡ್ಸ್ ಜಾಲಕ್ಕೆ

ಏಷ್ಯಾದ ದೇಶಗಳಲ್ಲಿ ಎಳೆಯ ವಿವಾಹಿತ ಸ್ತ್ರೀಯರು ಏಡ್ಸ್ ರೋಗದ ವಲಯಕ್ಕೆ ಸೇರಿಕೊಳ್ಳುತ್ತಿರುವ ಸಂಗತಿ ಇಂದು ಹೆಚ್ಚಾಗುತ್ತಿದೆ. ತಮ್ಮ ಗಂಡಂದಿರಿಗೆ ನಿಷ್ಠೆ ತೋರಿಯೂ, ಅದಕ್ಕೆ ಪ್ರತಿಫಲವಾಗಿ ಏಡ್ಸ್ ರೋಗ ಪಡೆಯುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ, ಎಂದು ವಿಶ್ವ ಸಂಸ್ಥೆ ಮತ್ತು ಆರೋಗ್ಯ ಸೇವಾ ಕಾರ್ಯಕರ್ತರು ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ವಿವಾಹಿತ, ಏಕವ್ಯಕ್ತಿ ಸಂಬಂಧ ಹೊಂದಿರುವ ಹೆಣ್ಣುಗಳಲ್ಲಿ ಏಡ್ಸ್ ರೋಗದ ಸಾಧ್ಯತೆಯು ಅತ್ಯಂತ ಕಡಿಮೆಯೆಂದು ಪರಿಗಣಿಸಿದ್ದ ಗುಂಪುಗಳೂ ಕೂಡ ಇಂದು ತಮ್ಮ ಜೀವನ ಸಂಗಾತಿಯ ಬಹುಲೈಂಗಿಕ ಸಂಬಂಧಗಳಿಂದಾಗಿ ಏಡ್ಸ್ ರೋಗಕ್ಕೆ ಬಲಿಯಾಗುತ್ತಿರುವ ದೃಶ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೆಲವರು ಏಷ್ಯಾ ದೇಶದ ಸಂಸ್ಕೃತಿಗಳಲ್ಲಿ, ಥಾಯ್‌ಲ್ಯಾಂಡೂ ಸೇರಿದಂತೆ ಗಂಡಸರಿಗೆ ವಿವಾಹೇತರ ಸಂಬಂಧವೆನ್ನುವುದು ಅತ್ಯಂತ ಸಹಜ ವೆನ್ನುವಂತೆ ಭಾವಿಸಲಾಗುತ್ತದೆ. ಹಾಗೆಯೇ ಅಜ್ಞಾನ, ಅವಿದ್ಯೆಯ ಕಾರಣದಿಂದಾಗಿ ಹೆಂಗಸರು ಕುಟುಂಬ ನಿಯಂತ್ರಣ ಮತ್ತು ಕಾಂಡೋಮ್‌ಗಳ ಬಳಕೆಯ ಬಗ್ಗೆಯೂ ಅಜ್ಞರಾಗಿರುತ್ತಾರೆ. ಯೂನಿಫೆಮ್‌ನ ಲೂಸಿತಾ ಲಾಜೋ ಹೇಳುವಂತೆ "ಈ ಪ್ರಾಂತ್ಯದಲ್ಲಿ ಎಳೆಯ ಹುಡುಗಿಯರೂ ಕೂಡ ಈ ರೋಗದ ವಿರುದ್ಧ ತಮ್ಮನ್ನು ರಕ್ಷಿಸಿಕೊಳ್ಳಲು ಯಾವುದೇ ಸಾಧನವಿಲ್ಲದೆ ಅಸಮರ್ಥರಾಗಿರುತ್ತಾರೆ. ವೇಶ್ಯೆಯರು ಮಾತ್ರವಲ್ಲದೆ, ತಮ್ಮ ಗಂಡಂದಿರಿಗೆ ನಿಷ್ಠೆಯಿಂದಿರುವ ಅತ್ಯಂತ ಸಾಮಾನ್ಯ, ಸಾಧಾರಣ ಗೃಹಿಣಿಯರೂ ಕೂಡ ಈ ರೋಗಕ್ಕೆ ತುತ್ತಾಗುತ್ತಿರುವುದು ಸಮಸ್ಯೆಯ ಗಂಭೀರತೆಯನ್ನು ಸೂಚಿಸುತ್ತದೆ.

ಕಳೆದ ವರ್ಷದ ವಿಶ್ವ ಸಂಸ್ಥೆಯ ವರದಿಯನ್ನು ಗಮನಿಸಿದರೆ ಹೆಚ್.ಐ.ವಿ. ಸೋಂಕನ್ನು ಪಡೆದ ಸ್ತ್ರೀ ಪುರುಷರ ಪ್ರಮಾಣದಲ್ಲಿ ಗಮನಾರ್ಹ ಅಂತರವು ಕಂಡುಬರುತ್ತದೆ. ವಿಶ್ವದಲ್ಲಿ ಮಹಿಳೆಯರ (15 ರಿಂದ 24 ವಯಸ್ಸಿನವರು) ಸಂಖ್ಯೆ 7.3 ಮಿಲಿಯನ್ ಆದರೆ ಹೆಚ್.ಐ.ವಿ. ತಗುಲಿದ ಗಂಡಸರ ಸಂಖ್ಯೆ 4.5 ಮಿಲಿಯನ್‌ರಷ್ಟಿದೆ. ಥಾಯ್‌ಲ್ಯಾಂಡ್‌ನಲ್ಲಿ ಹೆಚ್.ಐ.ವಿ. ಸೋಂಕಿನ ಪುರುಷರ ಸಂಖ್ಯೆ 1.3%ರಷ್ಟಿದ್ದರೆ ಹೆಂಗಸರ ಸಂಖ್ಯೆ 2.0%ರಷ್ಟಿದೆ.

ಇತ್ತೀಚೆಗೆ ಯೂನಿಫೆಮ್ ಸಂಘಟಿಸಿದ್ದ ಏಡ್ಸ್ ಕುರಿತ ಹದಿನೈದನೇ ಅಂತರರಾಷ್ಟ್ರೀಯ ಸಮಾವೇಶದಲ್ಲಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು, ಆರೋಗ ಕಾರ್ಯಕರ್ತರು ಭಾಗವಹಿಸಿದ್ದರು. ಲಾಜೋ ಹೇಳುವಂತೆ ಏಷ್ಯಾದ ಸಂಸ್ಕೃತಿಗಳಲ್ಲಿ ಹೆಣ್ಣಿನ ಸ್ಥಾನಮಾನ ತೀರ ಕೆಳಮಟ್ಟದಲ್ಲಿರುವುದರಿಂದ, ಲಿಂಗಗಳ ನಡುವಿನ ಅಧಿಕಾರದ ಅಸಮತೋಲನದಿಂದ ಸಮಸ್ಯೆಗಳು ಹೆಚ್ಚು ಉದ್ಭವಿಸುತ್ತವೆ. 'ಪಿತೃ ಪ್ರಾಧಾನ್ಯತೆಯ ಸಂಸ್ಕೃತಿ, ಮೌನವೇ ಮೌಲ್ಯವಾದ ಸಂಸ್ಕೃತಿ ಹಾಗೂ ಸಾಂಸ್ಕೃತಿಕ ನಿಷೇಧಗಳನ್ನು ಹೊಂದಿರುವ ಸಂಸ್ಕೃತಿ'ಯ ಮೂಲ ನೆಲೆಗಳನ್ನು ಕುರಿತು ಅಧ್ಯಯನ ನಡೆಸಬೇಕಿದೆ. ಪರಿಹಾರ ಹುಡುಕಬೇಕಿದೆ' ಎನ್ನುತ್ತಾರೆ. ಹೆಚ್. ಐ. ವಿ. ಸೋಂಕಿನ ಕಾಯಿಲೆ ಮತ್ತು ಸಮಾಜದಲ್ಲಿನ ಸ್ತ್ರೀ-ಪುರುಷ ಸಂಬಂಧಗಳನ್ನು ಗುರುತಿಸಿ, ಗಮನಿಸಿ ಚಿಕಿತ್ಸೆ ನೀಡದ ಹೊರತು ಈ ದಿಸೆಯಲ್ಲಿ ಪ್ರಗತಿ ಸಾಧ್ಯವಿಲ್ಲ.

ಲೈಂಗಿಕ ವ್ಯಾಪಾರಕ್ಕೆ ದಕ್ಷಿಣ ಆಫ್ರಿಕಾ ಕೇಂದ್ರ ಸ್ಥಾನ

ಇತ್ತೀಚೆಗೆ ಜೋಹಾನ್ಸ್ ಬರ್ಗ್‌ನಲ್ಲಿ ನಡೆದ 'ಅಂತರ ರಾಷ್ಟ್ರೀಯ ದೇಹ ಮಾರಾಟ' ಕುರಿತ ಸಮಾವೇಶದಲ್ಲಿ ಮೂಡಿ ಬಂದ ಅಭಿಪ್ರಾಯವೆಂದರೆ, ದಕ್ಷಿಣಾ ಆಫ್ರಿಕಾ ಲೈಂಗಿಕ ವ್ಯಾಪಾರದ ಕೇಂದ್ರಸ್ಥಾನವಾಗಿದೆಯೆಂಬ ಅಂಶ.

"ನಿಖರವಾದ ಅಂಕಿ ಅಂಶಗಳನ್ನು ಕೊಡುವುದು ಕಷ್ಟವಾದರೂ ದೇಹ ಮಾರಾಟ ಮತ್ತು ಲೈಂಗಿಕ ದಾಸ್ಯದಲ್ಲಿ ದಕ್ಷಿಣ ಆಫ್ರಿಕಾ ದೇಶವು ಆಫ್ರಿಕಾದ ರಾಷ್ಟ್ರಗಳಲ್ಲಿಯೇ ಮೊದಲ ಸ್ಥಾನದಲ್ಲಿ ನಿಲ್ಲುತ್ತದೆ" ಎಂದು ಅಭಿಪ್ರಾಯಪಡುತ್ತಾರೆ. ಅಂತರರಾಷ್ಟ್ರೀಯ ವಲಸೆಗಾರರ ಸಂಘದ ಜೋನಾಥನ್ ಮಾರ್ಟಿನ್, ಜೋಹಾನ್ಸ್ ಬರ್ಗ್‌ನಲ್ಲಿ ಲೈಂಗಿಕ ವ್ಯಾಪಾರವನ್ನು ಕುರಿತ ಸಮಾವೇಶಕ್ಕೆ ಬಂದ ಪ್ರತಿನಿಧಿಗಳಲ್ಲಿ ಜೋನಾಥನ್ ಮಾರ್ಟಿನ್ ಕೂಡ ಒಬ್ಬರು.

ದೇಹವ್ಯಾಪಾರ, ಹೆಣ್ಣುಗಳ ಮಾರಾಟ - ಇಂದು ವಿಶ್ವ ಸಮುದಾಯದಲ್ಲಿ ಒಂದು ಬೃಹತ್ ಉದ್ಯಮವಾಗಿದೆ. ಜೋನಾಥನ್ ಮಾರ್ಟಿನ್‌ರವರ ಪ್ರಕಾರ ದಕ್ಷಿಣ ಆಫ್ರಿಕೆಯು ಲೈಂಗಿಕ ವ್ಯಾಪಾರಿಗಳ ಪ್ರಿಯವಾದ ಸ್ಥಳವಾಗಿದೆ. ಬಡದೇಶಗಳಿಂದ ವಂಚಿಸಿ ತಂದ ಹದಿಹರೆಯದ ಮತ್ತು ಎಳೆಯ ವಯಸ್ಸಿನ ಹೆಣ್ಣು ಮಕ್ಕಳನ್ನು ದಕ್ಷಿಣ ಆಫ್ರಿಕೆಯಲ್ಲಿ ಕೆಲಸದ ಆಸೆಗೆ, ವೈಭವಧ ಜೀವನದ ಆಮಿಷ ತೋರಿಸಿ ಕರೆತರಲಾಗುತ್ತದೆ.

"ದಕ್ಷಿಣ ಆಫ್ರಿಕಾ ಸಂಪತ್ತಿನ ದೇಶ. ಅವಕಾಶಗಳ, ಸಾಧ್ಯತೆಗಳ ದೇಶ. ಈ ಹೆಸರಿನ ಲಾಭ ಮಾಡಿಕೊಳ್ಳುವ ಕ್ರಿಮಿನಲ್ ಸಿಂಡಿಕೇಟುಗಳು ಸುಳ್ಳು ಆಸೆಗಳನ್ನು ಭರವಸೆಗಳನ್ನು ತೋರಿಸಿ ವಿಶ್ವದ ನಾನಾ ಭಾಗಗಳ ಹೆಣ್ಣುಗಳನ್ನು ಇಲ್ಲಿಗೆ ಕರೆದುತರುತ್ತಾರೆ. ಈ ದಂಧೆಗೆ ಸಂಬಂಧಪಟ್ಟಂತೆ ಸೂಕ್ತ ಕಾನೂನಿನ ನಿಯಮಗಳೂ ಇಲ್ಲದಿರುವುದು ಈ ದಂಧೆಗೆ ಅನುಕೂಲಕರವಾಗಿದೆ. ಒಮ್ಮೆ ಇಲ್ಲಿಗೆ ಬಂದು ಬಲಿಪಶುಗಳಾಗುವ ಹೆಣ್ಣುಗಳಿಗೆ ಇಲ್ಲಿಂದ ತಪ್ಪಿಸಿ ಕೊಂಡು ಹೋಗಲು ಸಾಧ್ಯವೇ ಇಲ್ಲದಂತಹ ಪರಿಸ್ಥಿತಿ. ಏಕೆಂದರೆ ಅವರನ್ನು ಈ ದೇಶಕ್ಕೆ ಕರೆದುಕೊಂಡು ಬಂದು ಉಳಿಸಿಕೊಂಡಿರು ವುದಕ್ಕೆ ಯಾವುದೇ ಕಾನೂನಿನ ಪರವಾನಗಿ ಇರುವುದಿಲ್ಲ, ಆದ್ದರಿಂದ ಓಡಿ ಹೋಗಲು ಸಾಧ್ಯವೇ ಇಲ್ಲ.

ಹೆಣ್ಣುಗಳ ಮಾರಾಟವೂ ಮಾದಕ ವಸ್ತುಗಳ ವ್ಯಾಪಾರ ಮತ್ತು ಶಸ್ತ್ರಾಸ್ತ್ರಗಳ ವ್ಯಾಪಾರದಷ್ಟೇ ಬೃಹತ್ ಉದ್ಯಮವಾದರೂ ಆ ದಂಧೆಗೆ ಸಿಕ್ಕಂತಹ ಗಮನವನ್ನು ಇದು ಸೆಳೆದಿಲ್ಲ. ಆದರೆ ಕೊಲೆಗಡುಕರಿಗೆ, ಕ್ರಿಮಿನಲ್ ಸಿಂಡಿಕೇಟ್‌ಗಳಿಗೆ ಇದು ಅಷ್ಟೇ ಲಾಭ ತರುವ ಬೃಹತ್ ಉದ್ಯಮವಾಗಿದೆ. ಇದಕ್ಕೆ ಮುಖ್ಯ ಕಾರಣ, ಈ ನೆಲದಲ್ಲಿ ಸೂಕ್ತ ಕಾನೂನು ಇಲ್ಲ.

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು ?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಖಾಯಿಲೆ. ಈ ಖಾಯಿಲೆಯು ಸೋಂಕು ಹೊಂದಿದ ಈಡಿಸ್ ಈಡಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

1. ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.
2. ಬಯಲಲ್ಲಿ ಟೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.
3. ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಖಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದರಿಂದ ಈ ರೋಗವನ್ನು ತಡೆಗಟ್ಟಲು ಸುಲಭ ಹಾಗೂ ಸರಳ ವಿಧಾನ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ.

ಲಖನೋದ ಮುದುಕಿಯರು ಹಾಗೂ ಮಹಾಚುನಾವಣೆ

ಡಾ|| ರಹಮತ್ ತರೀಕೆರೆ

ಈ ಸಲದ ಚುನಾವಣೆಯಲ್ಲಿ ಕಂಡ ಒಂದು ದೃಶ್ಯ ಯಾಕೋ ಏನೋ ಗಾಢವಾಗಿ ಕಾಡುತ್ತಿದೆ. ಅದೆಂದರೆ ವಾಜಪೇಯಿಯವರು ಪಾರ್ಲಿಮೆಂಟ್ ಚುನಾವಣೆಗೆ ಸ್ಪರ್ಧಿಸಿದ್ದ ಲಖನೋದಲ್ಲಿ ಐವತ್ತು ರೂಪಾಯಿ ಸೀರೆಗಾಗಿ ಬಂದು, ನೂಕುನುಗ್ಗಲಿನಲ್ಲಿ ಪ್ರಾಣತೆತ್ತ ಮುದುಕಿಯರದು. ಚುನಾವಣೆ ಮುಗಿದು, ಫಲಿತಾಂಶವು ಹೊರಬಿದ್ದು ತಮ್ಮ ಆಡಳಿತದ ಕಾಲದಲ್ಲಿ ಭಾರತ ಕಂಡರಿಯದ ಕೋಮು ಹಿಂಸೆಯನ್ನು ಗುಜರಾತಿನಲ್ಲಿ ಸಂಘಟಿಸಿದ್ದ ಸಂಘಪರಿವಾರದ ಸರಕಾರವು ಅಧಿಕಾರ ಕಳೆದುಕೊಂಡಿದೆ; ಒಂದು ಕಾಲಕ್ಕೆ ಜಾಗತೀಕರಣದ ಶಕೆಯನ್ನು ಭಾರತದಲ್ಲಿ ಉದ್ಘಾಟಿಸಿದ ಮನಮೋಹನ ಸಿಂಗರು ಹೊಸ ಸರಕಾರದ ಚುಕ್ಕಾಣಿಯನ್ನು ವಹಿಸಿಕೊಂಡೂ ಆಗಿದೆ. ಚುನಾವಣೆಯ ಎಲ್ಲ ಗಲಭೆಗಳೂ ಆಟಾಟೋಪಗಳೂ ತಣ್ಣಗಾದಂತೆ ಕಾಣುತ್ತಿದೆ. ಆದರೂ ನಮ್ಮ ದೇಶದ ರಾಜಕೀಯ ಚರಿತ್ರೆಯಲ್ಲಿ ದಾಖಲಾಗದೆ ಹೋಗಬಹುದಾದ ಎಷ್ಟೋ ವಿದ್ಯಮಾನಗಳ ಪೈಕಿ ಒಂದಾಗಿರುವ ಲಖನೋದ ಮುದುಕಿಯರ ಸಾವು ಮಾತ್ರ ಹಿಮ್ಮಡಿಯಲ್ಲಿ ನೆಟ್ಟ ಮುಳ್ಳಿನಂತೆ ಕಾಡುತ್ತಿದೆ.

ಕಾಲ್ತುಳಿತದಲ್ಲಿ ಅನೇಕ ಕಡೆ ಜನ ಸಾಯುತ್ತಾರೆ - ಹಜ್ ಯಾತ್ರೆಯಲ್ಲಿ ಸೈತಾನನಿಗೆ ಕಲ್ಲು ಹೊಡೆಯಲು ಹೋಗಿ, ಕುಂಭಮೇಳದಲ್ಲಿ ಸ್ನಾನ ಮಾಡಲು ಹೋಗಿ, ಆದರೆ ಇವರೆಲ್ಲ ಪುಣ್ಯ ಸಂಪಾದನೆಗಾಗಿ ಹೋಗಿ ಸತ್ತವರು. ಪವಿತ್ರ ಕ್ಷೇತ್ರಗಳಲ್ಲಿ ಸಾಯುವುದೂ ಪುಣ್ಯವೆಂದು ತಿಳಿದವರು. ಇವರ ಸಾವು ಮರುಕ ಹುಟ್ಟಿಸುವುದಿಲ್ಲ. ಆದರೆ ಹದಿನಾಲ್ಕು ಮೊಳದ ಸೀರೆಯ ಆಸೆಗಾಗಿ ಹೋಗಿ ಸತ್ತವರು ಮಾತ್ರ ಪರಮ ನಿರ್ಗತಿಕರು. ವಯಸ್ಸಿನಿಂದ ಜೀರ್ಣರಾಗಿಯೂ ಬಡತನದಿಂದ ನಿಶ್ಶಕ್ತರಾಗಿಯೂ ಇದ್ದ ಅವರ ಜೀವಗಳು ಆ ತುಳಿದಾಟದಲ್ಲಿ ಅರೆಕ್ಷಣಕ್ಕೆ ಹೋಗಿರಬೇಕು. ಶವಾಗಾರದಲ್ಲಿಟ್ಟಿದ್ದ ಆ ಮುದುಕಿಯರ ಚಿತ್ರಗಳನ್ನು ಪತ್ರಿಕೆಗಳು ಅಚ್ಚುಹಾಕಿದ್ದವು. ಕಲ್ಲುಹಾಕಿ ಜಜ್ಜಿದ ಡಬ್ಬದಂತೆ ಬೊಚ್ಚುಬಿದ್ದಿರುವ ಬಾಯಿ "ಆ..." ಎಂದು ತೆರೆದಿತ್ತು - ಏನೋ ಹೇಳಲು ಹೋಗಿ ಸತ್ತವರಂತೆ. ಸೀರೆ ಹಂಚಲು ಹಾಕಲಾಗಿದ್ದ ಪೆಂಡಾಲಿನ ಮುಖ್ಯ ದೃಶ್ಯದಲ್ಲಿ ಒಂದು ಉಪದೃಶ್ಯವಿತ್ತು. ಅದೆಂದರೆ ನೂಕುನುಗ್ಗಲಿನಲ್ಲಿ ಬಾಕಿಯಾದ ಆ ಹೆಂಗಸರ ಚಪ್ಪಲಿರಾಶಿ. ಅವೆಲ್ಲ ಹವಾಯಿ ಚಪ್ಪಲಿಗಳು. ಬಹುಶಃ ಹಿಮ್ಮಡಿ ಸವೆದು ಅರ್ಧಚಂದ್ರನ ಆಕಾರಕ್ಕೆ ಬಂದಿರುವ, ಬಾರುಗಳ ಗುಂಡಿಗಳು ಕಿತ್ತು ಪಿನ್ನು ಹಾಕಿದ ಚಪ್ಪಲಿಗಳು. ನಮ್ಮ ದೇಶದಲ್ಲಿ ಬಡವರು ಸಾಮಾನ್ಯವಾಗಿ ಬರಿಗಾಲಿನಲ್ಲಿ ನಡೆಯುತ್ತಾರೆ. ಒಂದೊಮ್ಮೆ ಹಾಕಿದರೆ ಹವಾಯಿ ಚಪ್ಪಲಿ ಹಾಕುತ್ತಾರೆ. ಹವಾಯಿ ಚಪ್ಪಲಿಗಳೂ ಭಾರತದ ಬಡವರ ಸಂಗಾತಿಗಳು. ಅಂತೂ ಮುದುಕಿಯರ ಹೆಣಗಳೂ ಅವರ ಹವಾಯಿ ಚಪ್ಪಲಿಗಳೂ ಕೂಡಿಕೊಂಡು ಕಳೆದ ಹತ್ತು ವರುಷಗಳ ಕಾಲ ಜಾಗತೀಕರಣಕ್ಕೊಳಗಾಗಿ ಭಾರತ ಮಾಡಿದ ಸಾಧನೆಯನ್ನು ವ್ಯಂಗ್ಯ ಮಾಡುತಿತ್ತದ್ದವು. ಭಾರತದ ಅಭಿವೃದ್ಧಿಯ ಬಗ್ಗೆ ನಮ್ಮ ಅಧಿಕಾರಿಗಳೂ, ತಜ್ಞರೂ, ರಾಜಕಾರಣಿಗಳೂ ಮಾಡವ ವ್ಯಾಖ್ಯಾನಗಳಿಗೆ ಪ್ರತಿಭಾಷ್ಯವನ್ನು ಬರೆಯುತ್ತಿದ್ದವು. ಚುನಾವಣೆಗಳಲ್ಲಿ ಹಿಂದಿನ ರಾತ್ರಿ ದುಡ್ಡು, ಸಾರಾಯಿ, ಸೀರೆ (ಈಸಲ ಮೂಗುತಿ !) ಹಂಚುವುದು ಮೊದಲಿಂದಲೂ ನಡೆದುಬಂದಿದೆ. ಈ ಪದಾರ್ಥಗಳಲ್ಲಿ ಕೊನೆಯವು ಹೆಂಗಸರಿಗೆ ಸಂಬಂಧಿಸಿದ ಉಡುಗೆ ತೊಡುಗೆಗಳು. ಹೆಂಗಸರು ಅವನ್ನು ಪಡೆಯಲು ಹೋಗಿ ಪ್ರಾಣ ಕಳಕೊಂಡಿದ್ದು ಮಾತ್ರ ನಮ್ಮ ರಾಜಕೀಯ ಚರಿತ್ರೆಯಲ್ಲಿ ಹೊಸತಾಗಿದೆ.

ನಾನು ನೋಡಲು ಆಸೆಪಟ್ಟಿರುವ ಭಾರತದ ನಗರಗಳಲ್ಲಿ ಲಖನೊ ಒಂದು. ನನ್ನ ಕಲ್ಪನೆಯ ಲಖನೊ ಬೇರೆಯೇ ಇತ್ತು. ನಾನು ಓದಿ ತಿಳಿದುಕೊಂಡಂತೆ ಲಖನೊ ಭಾರತದ ಹಳೇ ನಗರಗಳಲ್ಲಿ ಒಂದು. 'ಪುರಾತನ ಲಖನೊ' ಎಂಬ ಪ್ರಸಿದ್ಧ ಕೃತಿಯೇ ಪ್ರಕಟವಾಗಿದೆ. ಅವಧಪ್ರಾಂತ್ಯದ ರಾಜಧಾನಿಯಾಗಿದ್ದ ಲಖನೊ ಭವ್ಯವಾದ ಕಟ್ಟಡಗಳ ಊರು. ನವಾಬ ಮಹಮ್ಮದ್ ಷಾಹನ ಕಾಲದಲ್ಲಿ ಅದು ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿ ಬೆಳೆಯಿತು. ಅದು ತನ್ನ ಸಂಗೀತ, ಕಾವ್ಯ, ನೃತ್ಯ, ವಾಸ್ತುಶಿಲ್ಪಗಳಿಗೆ ಖ್ಯಾತಿ ಪಡೆಯುತ್ತ ಹೋಯಿತು.

ಹೆಸರಾಂತ ಹಾಡುಗಾರ್ತಿ ಉಮರಾವ್ ಜಾನ್ ಅಲ್ಲಿಯವಳು. ಇದು ಭಾರತದ ಶಿಯಾ ಮುಸ್ಲಿಮರ ಸ್ಮಾರಕಗಳಾದ ಇಮಾಂಬಾಡ ಇರುವ ಜಾಗ. ಲಖನೊವಿನ ಕೀರ್ತಿಸುವ ಮಹಮದ್ ರಫಿ ಒಂದು ಹಾಡಿದೆ. ಇಡೀ 'ಚೌದವೀಂಕ ಚಾಂದ್' ಲಖನೊ ಕುಲೀನ ಮುಸ್ಲಿಮರ ಮೇಲೆ ತೆಗೆದ ಸಿನಿಮಾ. ಲಖನೊದ ಉರ್ದುವಿಗೆ ಕಾವ್ಯಾತ್ಮಕ ಗುಣವಿದೆ ಎಂದು ಹೇಳುತ್ತಾರೆ. ಲಖನೊ ಉರ್ದು ಸಾಹಿತ್ಯದ ಚರಿತ್ರೆಯಲ್ಲಿ ದೊಡ್ಡ ಕೇಂದ್ರ. ಅದರಲ್ಲೂ ಉರ್ದು ಕಾವ್ಯದ ಜನಪ್ರಿಯ ಪ್ರಕಾರವಾದ ಶಾಯರಿಗಳ ಊರು. ಮಧ್ಯಕಾಲೀನ ನವಾಬಿ ಸಂಸ್ಕೃತಿಯ ಭಾಗವಾಗಿದ್ದ ಶೃಂಗಾರ ವಿಲಾಸ ಪ್ರಧಾನವಾದ ಗಜಲುಗಳ ಜಾಗ. ಲಖನೊದ ಜನರೆಲ್ಲ ಕವಿಗಳೆಂದು ಹೇಳುತ್ತಾರೆ. ಹಾಗೆ ಕಂಡರೆ ಲಖನೊದ ಪಾರ್ಲಿಮೆಂಟ್ ಸೀಟಿಗೆ ಸ್ಪರ್ಧಿಸಿದ್ದ ವಾಜಪೇಯಿ ಯವರೂ ಕವಿಯಾಗಿ ಹೆಸರಾದವರು. ಸತ್ತ ಬಹುತೇಕ ಹೆಂಗಸರು ಅವರ ವಯಸ್ಸಿನವರೇ. ತನ್ನ ರಾಜಕೀಯ ಗೆಲುವಿನ ಭಾಗವಾಗಿ ಸತ್ತ ಈ ಹೆಂಗಸರ ಮೇಲೆ ಕವಿ ಹೃದಯದ ಈ ರಾಜಕಾರಣಿ ಎಷ್ಟು

ಮರುಗಿದರೋ ಗೊತ್ತಿಲ್ಲ. ಆದರೆ "ಸೀರೆ ಹಂಚುವುದು ತಪ್ಪಲ್ಲ" ಎಂದು ಹೇಳಿಕೆ ಮಾಡಿದರು. ಒಟ್ಟಿನಲ್ಲಿ ನನ್ನ ರಮ್ಯಕಲ್ಪನೆಯ ಲಖನೊದ ಎಲ್ಲ ಸ್ವಪ್ನಗಳನ್ನು ಈ ಮುದುಕಿಯರು ಚೂರು ಮಾಡಿದರು. ರಫಿಯ ಹಾಡಿನಲ್ಲಿ ಇಲ್ಲಿಯ ಜನ ಗೆಳೆತನಕ್ಕಾಗಿ ಜೀವ ಬಿಡುವವರು ಎಂಬ ಸಾಲಿದೆ ("ಕಹೋ ತೊ ದೇದೇ ಜಾನ್ ಭಿ ಜೋ ದೋಸ್ತಿಕಾ ಯಖೀನ್"). ಆದರೆ ಈ ಹೆಂಗಸರು ಸೀರೆಯ ತುಣಕಿಗಾಗಿ ಪ್ರಾಣಬಿಟ್ಟು ಲಖನೊದ ಕೀರ್ತಿಯನ್ನು ಹಾಳುಮಾಡಿದರು.

ವಾಜಪೇಯಿಯವರು ಲಖನೊದ ಪ್ರತಿನಿಧಿಯಾಗುವುದೇ ಚರಿತ್ರೆಯ ಒಂದು ವ್ಯಂಗ್ಯ. ಯಾಕೆಂದರೆ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮವು ಕಾನ್ಪುರ ಬಿಟ್ಟರೆ ಭುಗಿಲೆದ್ದಿದ್ದು ಲಖನೊದಲ್ಲಿಯೇ. ಜನರು ಇಲ್ಲಿನ ಬ್ರಿಟಿಷ ರೆಸಿಡೆಂಟನನ್ನು ಕೊಂದು, ಅವನ ಅರಮನೆಯನ್ನು ಧ್ವಂಸಮಾಡಿ ದೊಡ್ಡ ಪೆಟ್ಟು ಕೊಟ್ಟರು. ಮಾನ್ಯ ವಾಜಪೇಯಿಯವರಾದರೊ ಬ್ರಿಟಿಷರ ವಿರುದ್ಧ ಹೋರಾಡಿದವರನ್ನು ಹಿಡಿದುಕೊಡಲು ಕಟಕಟೆಯಲ್ಲಿ ನಿಂತು ಸಾಕ್ಷಿ ಹೇಳಿದವರು. ಸಂಘಪರಿವಾರದ ಆಲೋಚನಾ ಕ್ರಮದಲ್ಲಿಯೇ ಜನರ ಸ್ವಾತಂತ್ರ್ಯ, ಹಸಿವು, ಬಡತನ ದೊಡ್ಡ ಸಮಸ್ಯೆಗಳಲ್ಲ ಅನಿಸುತ್ತದೆ. ಏನೇ ಇರಲಿ, 80 ವರುಷಗಳ ವಾಜಪೇಯಿ ನಡೆದಾಡಲು ಕಷ್ಟಪಟ್ಟರೂ, ಪ್ರಧಾನಿಯಾದ ಬಳಿಕ ತಿಂದು ಕುಡಿದು ಸುಖಜೀವನ ಮಾಡಿದವರು. ಎಂತಲೇ ಅವರ ಕೆಂಪನೆಯ ಕೆನ್ನೆಯ ಚರ್ಮದಲ್ಲಿ ಈಗಲೂ ಹೊಳಪಿದೆ. ಅದರ ಆಧಾರದಲ್ಲಿ 'ಭಾರತ ಪ್ರಕಾಶಿಸುತ್ತಿದೆ' ಎಂದು ಧೈರ್ಯದಿಂದ ಹೇಳಬಹುದು. ಆದರೆ ಒಲೆಗಿಟ್ಟರೆ ಧಗ್ಗನೆ ಸುಡುವಂತಹ ದಬ್ಬೆಗಳಂತಿದ್ದ ಆ ಮುದುಕಿಯರು ಲಖನೊದ ಜೋಪಡಿ ಪ್ರದೇಶಗಳಿಂದ, ಕೆಲವರು ಪಕ್ಕದ ಹಳ್ಳಿಗಳಿಂದ ಬಂದವರು. ಅದರಲ್ಲಿ ದಲಿತರು, ಮುಸ್ಲಿಮರು ಎಲ್ಲ ಜಾತಿಯ ಬಡವರಿದ್ದರು. ಅವರ ಕೆನ್ನೆಯ ಮಾಂಸಖಂಡವೆಲ್ಲ ಕರಗಿ ಎಲುಬಿನ ಚೂಪು ಕೋನಗಳು ಇಣುಕುತ್ತ, ನಮ್ಮ ಹೈದರಾಬಾದ್ ಕರ್ನಾಟಕದ ರಸ್ತೆಗಳನ್ನು ನೆನಪಿಸುತ್ತಿದ್ದವು. ಅವರಲ್ಲಿ ಪ್ರಕಾಶಿಸುವಂತಹದ್ದು ಏನಾದರೂ ಇದ್ದರೆ, ಅದು ಸೀರೆ ಸಿಕ್ಕೀತು ಎಂಬ ಆಶೆಯೊಂದೇ ಆಗಿತ್ತು.

ಹೈದರಾಬಾದ್ ಕರ್ನಾಟಕದಲ್ಲೂ ಇಂತಹದೇ ಹೆಂಗಸರ ಒಂದು ದೊಡ್ಡ ಸರತಿಯ ಸಾಲನ್ನು ನಾನು ನೋಡಬೇಕಾಗಿ ಬಂದಿತು - ಚುನಾವಣೆಯ ಕೆಲಸಕ್ಕೆಂದು ಹೋದಾಗ. ನನಗೆ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ ಕೋಟೆಕಲ್ ಎಂಬ ಹಳ್ಳಿಯ ಮತಗಟ್ಟೆಗೆ ಹಾಕಲಾಗಿತ್ತು. ಅದೊಂದು ವಿಚಿತ್ರ ಊರು. ಈಗಲೂ 15ನೇ ಶತಮಾನದಲ್ಲಿ ಬದುಕಿರುವಂತಿದೆ. ಮುದ್ದೆಗಳಂತಹ ಬಂಡೆಗಳನ್ನು ಮೈತುಂಬ ಹೇರಿಕೊಂಡಿರುವ ಎರಡು ಬೆಟ್ಟಗಳ ಸಂದಿಯಲ್ಲಿ ಊರಿದೆ. ಯಾವತ್ತಾದರೂ ಆ ಬಂಡೆಗಳಿಗೆ ಕೆಳಗಿಳಿಯಬೇಕೆಂದು ಮನಸ್ಸಾದರೆ, ಇಡೀ ಊರು ಪಡ್ಚಾ ಆಗುತ್ತದೆ. ತಾಲೂಕು ಕೇಂದ್ರ ಮಾನವಿ ನಲವತ್ತು ಮೈಲಿ ದೂರದಲ್ಲಿರುವುದರಿಂದ ಪಕ್ಕದ ತಾಲೂಕಿನ ಕೇಂದ್ರವಾದ ಲಿಂಗಸುಗೂರೇ ಹತ್ತಿರದ ಪಟ್ಟಣ. ಊರಿಗೊಂದೇ ಬೀದಿ. ಇರುವ 250 ಮನೆಗಳಲ್ಲಿ 245 ಬೇಡ ನಾಯಕರ ಮನೆಗಳು, 1 ಜಂಗಮರ ಮನೆ, 4 ಕುಂಬಾರರವು. ಊರ ಮೊದಲಿಗೆ ಇರುವ ಜಂಗಮರ ಮನೆಯವರಿಗೆ ದೊಡ್ಡ ಮನೆ ದೊಡ್ಡ ಆಸ್ತಿಯೂ ಇದೆ. ಮಾನವಿಯಲ್ಲಿ ಕಿರಾಣಿ ಅಂಗಡಿಯಿದೆ. ಆಸ್ತಿಯ ಉಸ್ತುವಾರಿಗೆಂದು ಕೆಲವರನ್ನು ಬಿಟ್ಟು ಉಳಿದವರೆಲ್ಲ ಮಾನವಿಯಲ್ಲಿಯೇ ಇರುತ್ತಾರೆ. ದಷ್ಟಪುಷ್ಟವಾಗಿರುವ ಅವರ ಮನೆಯ ಯುವಕರೊಬ್ಬರು ಬೆಳ್ಳಗೆ ಹೊಳೆಯುವ ಬಟ್ಟೆ ಹಾಕಿಕೊಂಡು ಬೈಕಿನಲ್ಲಿ ಬಂದು ಓಟುಮಾಡಿ ಹೋದರು. ವಿಶೇಷ ಎಂದರೆ ಇಡೀ ಊರಲ್ಲಿ ಯಾರಿಗೂ ಪೆಟ್ರೋಲಿನಿಂದ ನಡೆಯುವ ಗಾಡಿಗಳಿಲ್ಲ. ಆದರೆ ನಾಲ್ಕು ಜನರಿಗೆ ಸೈಕಲ್ಲಿದೆ. ಒಬ್ಬರೂ ಪದವೀಧರರಲ್ಲ. ಇಬ್ಬರು ಹುಡುಗರು ಎಸ್.ಎಸ್.ಎಲ್.ಸಿ. ಕಟ್ಟಿದ್ದಾರೆ. ಇಬ್ಬರು ಸರಕಾರಿ ನೌಕರರಿದ್ದಾರೆ. ಅವರಲ್ಲಿ ಒಬ್ಬರು ಪ್ರೈಮರಿ ಸ್ಕೂಲ್ ಟೀಚರ್. ಇನ್ನೊಬ್ಬರು ಕೆ.ಎಸ್.ಆರ್.ಟಿ.ಸಿ. ಕಂಡಕ್ಟರ್. ಈ ವಾಲ್ಮೀಕಿ ಬೇಡರಿಗೆ ರಾಜಕೀಯ ಪ್ರಾತಿನಿಧ್ಯವಿಲ್ಲ ಎಂತಲ್ಲ. ಬಹಳ ಕಾಲದಿಂದ ರಾಯಚೂರಿನ ಎಂ.ಪಿ. ಆಗಿರುವ ಕಾಂಗ್ರೆಸ್ಸಿನ ವೆಂಕಟೇಶ ನಾಯಕರು ಬೇಡರ ಪೈಕಿಯೇ. (ಈಗಲೂ ಅವರೇ ಗೆದ್ದಿದ್ದಾರೆ) ಕೋಟೆಕಲ್ಲಿನಲ್ಲಿ ಇರುವ ನಾಗರಿಕ ಸೌಲಭ್ಯಗಳೆಂದರೆ, ಜಿಲ್ಲಾ ಮುಖ್ಯರಸ್ತೆಯಿಂದ ಹಳ್ಳಿಯವರೆಗೆ ಜಲ್ಲಿರಸ್ತೆ, ಒಂದು ಪ್ರೈಮರಿ ಶಾಲೆ, ಕುಡಿಯುವ ನೀರಿನ ಟ್ಯಾಂಕು ಹಾಗೂ ವಿದ್ಯುತ್ ದೀಪಗಳು. ಆದರೆ ತುಂಗಭದ್ರಾ ಎಡದಂಡೆ ಕಾಲುವೆಯ ನೀರೂ ಮಾನವಿ ತಾಲೂಕಿನವರೆಗೆ ಬಂದರೂ ಈ ಊರಿಗೆ ಅದು ಬಂದಿಲ್ಲ. ಮನೆಗೆ ಐದರಿಂದ ಹತ್ತೆಕರೆ ಖುಷ್ಕಿ ಭೂಮಿಯಿದ್ದರೂ ನೀರಾವರಿ ಇಲ್ಲ. ಮೂರು ವರುಷದಿಂದ ಸರಿಯಾಗಿ ಮಳೆಯಿಲ್ಲ. ಹೆಚ್ಚಿನ ಗಂಡಸರು, ಗಟ್ಟಿಮುಟ್ಟಾಗಿರುವ ಹೆಂಗಸರು ಕಾಫಿ ತೋಟಗಳಿಗೋ, ರಸ್ತೆ ಕೆಲಸಕ್ಕೆ ಗೋವಾ, ಮಂಗಳೂರು, ಪುಣೆ, ಮುಂಬಯಿಗಳತ್ತಲೋ ಗುಳೆ ಹೋಗಿ, ಇಡೀ ಊರು ಅರ್ಧಕ್ಕರ್ಧ ಖಾಲಿಯಾಗಿತ್ತು. ಇಡೀ ಊರಿನಲ್ಲಿ ವಿಶೇಷವೆಂದರೆ ಒಂದೆ ಒಂದು ಮುಸ್ಲಿಮರ ಮನೆಯಿರದಿದ್ದರೂ 16 ಕಂಬದ ಮೊಹರಂ ಹಬ್ಬ ಆಚರಿಸುವ ಮಸೀದಿ ಇದೆ. ಇಷ್ಟು ಊರಿನ ಸ್ಥೂಲಚಿತ್ರ.

ನಮ್ಮ ಪೋಲಿಂಗ್ ತಂಡವು ಊರಹೊರಗಿನ ಶಾಲೆಯಲ್ಲಿ ಮಲಗಲು ವ್ಯವಸ್ಥೆ ಮಾಡಿಕೊಳ್ಳುವಾಗ ಶಾಲೆಯ ಮುಂಭಾಗದ ಬಯಲಲ್ಲಿ ಹಲವಾರು ಜನ ಮಲಗಲು ಕೌದಿ ಚಾಪೆಯ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಬೇಸಿಗೆಯಲ್ಲಿ ಸೆಕೆಗೆ ಮನೆಯ ಹೊರಗೆ ಮಲಗುವುದು ಹೊಸತಲ್ಲ. ಆದರೆ ಊರ ಹೊರಗೆ ? ಅದೂ ಬಯಲಲ್ಲಿ ! ಯಾಕೆಂದು ತಿಳಿಯಲಿಲ್ಲ. ಸರಿ ರಾತ್ರಿಯಿರಬೇಕು. ನಾಯಿಗಳು ಬೊಗಳತೊಡಗಿದವು. ವ್ಯಾನೊಂದು ಭರ್‍ರನೆ ಬಂದಂತೆ, ಅಗಸಿಬಾಗಿಲಿನ ಮುಂದೆ ಮಲಗಿದ್ದ ಜನರೆಲ್ಲ ಗಡಿಬಿಡಿ

ಯಿಂದ ಎದ್ದಂತೆ, ಏನನ್ನೋ ಇಳಸಿಕೊಂಡು ಹಂಚಿಕೊಂಡಂತೆ ಆಯಿತು. ಕೊಂಚ ಹೊತ್ತಿನಲ್ಲಿಯೇ ಊರಿನ ಇನ್ನೊಂದು ದಿಕ್ಕಿನಿಂದ ಇನ್ನೊಂದು ಜೀಪು ಬಂದಂತೆ, ಬಂದವರು ಅಲ್ಲಿದ್ದವರಿಗೆ ಹಿಡಿದು ಬೈದಂತೆ, ಬಡಿದಂತೆ, ಬಡಿಸಿಕೊಂಡವರು ಕೂಗಾಡಿದಂತೆ-ಒಟ್ಟಿನಲ್ಲಿ ಏನೆಂದು ತಿಳಿಯದ ಪ್ರಕ್ಷುಬ್ಧ ಪರಿಸ್ಥಿತಿ ! ತಣ್ಣಗಿನ ರಾತ್ರಿಯಲ್ಲಿ ಈ ಕೂಗಾಟ ತೀಕ್ಷ್ಣವಾಗಿತ್ತು. ಮಾರನೆಯ ದಿನ ಬೆಳಕು ಹರಿದ ಮೇಲೆ ಗೊತ್ತಾಯಿತು. ಊರ ಹೊರಗೆ ಮಲಗಿದ್ದವರೆಲ್ಲ ಬೇರೆಬೇರೆ ಪಕ್ಷದವರು ರಾತ್ರೋರಾತ್ರಿ ತಂದು ಕೊಡುವ ಸೀರೆ ಸರಾಯಿ ಪಡೆಯಲು ಕಾದವರು ಎಂದು. ಸೀರೆ (ಸರಾಯಿ?) ಹಂಚಲು ಬಂದವರನ್ನು ಇನ್ನೊಂದು ಪಕ್ಷದವರು ಅಟ್ಟಿಸಿಕೊಂಡು ಬಂದರು. ಮಲಗಿದ್ದವರೆಲ್ಲ ದಿಕ್ಕಾಪಾಲಾಗಿ ಓಡಿಹೋದರು. ಕಾದಿದ್ದವರಿಗೆ ಸೀರೆ ಸಿಕ್ಕಿತೋ ಇಲ್ಲವೋ ಗೊತ್ತಾಗಲಿಲ್ಲ.

ಒಂದು ಸಾವಿರದಷ್ಟು ಜನಸಂಖ್ಯೆಯಿರುವ ಕೋಟೆಕಲ್ಲಿನಲ್ಲಿ 650 ಓಟುಗಳಿದ್ದವು. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಮತದಾದರು ಹೆಂಗಸರು. ಆದರೆ 399 ಜನ ಮಾತ್ರ ಓಟು ಮಾಡಿದರು. ಮಾಡಿದವರಲ್ಲಿ ಹೆಚ್ಚಿನವರು ಹೆಂಗಸರು ಅಥವಾ ಮುದುಕಿ ಯರು. ಅವರು ಹೊಸ ಸೀರೆಯನ್ನೇನಾದರೂ ಉಟ್ಟಿದ್ದಾರೆಯೇ ಎಂದು ಕುತೂಹಲದಿಂದ ನೋಡಿದೆ. 399 ಮತದಾರರಲ್ಲಿ ಒಳ್ಳೆ ಬಟ್ಟೆ ತೊಟ್ಟು ಬಂದವರು 20-30 ಜನ ಇರಬೇಕು. ಉಳಿದವರೆಲ್ಲರೂ ಊರ ರೀತಿಯಲ್ಲಿ, ಲಖನೊದಲ್ಲಿ ಸೀರೆಗಾಗಿ ಬಂದು ಸತ್ತುಹೋದವರಿಗಿಂತ ಯಾವ ರೀತಿಯಲ್ಲೂ ಬೇರೆಯಿರಲಿಲ್ಲ. ದೂರದ ಲಖನೊ - ಹತ್ತಿರದ ಕೋಟೆಕಲ್ಲು ಒಂದೇ ಎನಿಸಿತು.

ನನಗೆ ಕಾಡಿಸಿದ್ದು ನಮ್ಮ ಮತಗಟ್ಟೆಯ ಎದುರಿನ ಒಂದು ಗುಡಿಸಲು. ಅದು ಚುನಾವಣೆ ನಿಯಮದ ಪ್ರಕಾರ, ಚುನಾವಣಾ ಪ್ರಚಾರ ಮಾಡಲು ನಿಷೇಧಿಸಿದ ಅಳತೆಯೊಳಗೆ ಬರುತ್ತಿತ್ತು. ಆದರೆ ಅದನ್ನು ಅಲ್ಲಿಂದ ಹೊರಗೆ ಕಳಿಸುವುದಾದರೂ ಹೇಗೆ ? ಜೌಗು ನೀರಲ್ಲಿ ಬೆಳೆಯುವ ಹಾಪುಹುಲ್ಲಿನಿಂದ ಮಾಡಿದ ಆ ಸಣ್ಣ ಗುಡಿಸಲ ಬಾಗಿಲು ಎಷ್ಟೋ ದಿನದಿಂದ ಮುಚ್ಚಿದಂತಿತ್ತು ; 'ಹೊಸಿನಲ್ಲಿ ಹುಲ್ಲುಹುಟ್ಟಿ ಮನೆಹೊಳಗೆ ರಜತುಂಬಿ, ಮನೆಯೊಳಗೆ ಮನೆಯೊಡೆಯ ಇದ್ದಾನೋ ಇಲ್ಲವೊ' ? ಎಂಬಂತಿತ್ತು. ಮನೆಯವರು ಎಷ್ಟೋ ದಿನವಾಗಿತ್ತು ಗುಳೆ ಹೋಗಿ. ಮಳೆಬೀಳುವ ಸುದ್ದಿಮುಟ್ಟುವ ತನಕ ಅವರು ಮರಳಿ ಬರುವುದಿಲ್ಲ. ಮತದಾನದ ಪವಿತ್ರ ಕೆಲಸಕ್ಕೆ ಬರಬೇಕು ಎಂದು ಆ ಕುಟುಂಬಕ್ಕೆ ನೆನಪೇ ಇದ್ದಂತಿಲ್ಲ. ಆದರೆ ಇಡೀ ದಿನ, ಇಡೀ ಚುನಾವಣೆಯನ್ನು ಧಿಕ್ಕರಿಸುವಂತೆ, ಅಣಕಿಸುವಂತೆ, ಬೂತಿನ ಮುಂದಿದ್ದ ಆ ಬಾಗಿಲು ಬಡಿದ ಜನವಿಹೀನ ಗುಡಿಸಲು, ಮೌನವಾಗಿ ಕಠೋರವಾಗಿ ನಿಂತಿತ್ತು- ಅನಾಥವಾಗಿ ಬಿದ್ದ ಲಖನೊದ ಮುದುಕಿಯರ ಹವಾಯಿ ಚಪ್ಪಲಿಗಳಂತೆ.

ಮತ್ತೊಂದು ಮುದುಕರ ಜೋಡಿ ಈ ಚುನಾವಣೆಯ ಸಂಬಂಧವಾಗಿಯೇ ನನಗೆ ಹೊಸಪೇಟೆಯ ನಮ್ಮ ಬಡಾವಣೆಯಲ್ಲಿ ಪರಿಚಯವಾಯಿತು. 70 ವರುಷದ ಆಸುಪಾಸಿನ ಇವರು ಹೊಸದಾಗಿ ಕಟ್ಟುತ್ತಿರುವ ಮನೆಗಳ ಕಾವಲು ಕೆಲಸ ಮಾಡುತ್ತ ಗೋಡೆಗಳ ಕ್ಯೂರಿಂಗ್ ಮಾಡುತ್ತ ಶೆಡ್ಡುಗಳಲ್ಲಿ ವಾಸವಾಗಿದ್ದವರು. ಆ ಮನೆ ಮುಗಿದ ಮೇಲೆ ಇನ್ನೊಂದು ಕಟ್ಟುವ ಮನೆಯನ್ನು ಹುಡುಕಿ, ವಾಚ್‌ಮನ್ ಕೆಲಸವನ್ನು ಕೇಳಿ ಪಡೆದು ಮಾಡುತ್ತ ಇದ್ದರು. ಮುದುಕ ಹನುಮಂತಪ್ಪ ಸಂಜೆ ಪಾಕೀಟು ಹಾಕಿಕೊಂಡು ಭಜನೆ ಪದ ಹಾಡುತ್ತಿದ್ದ. ವಿಚಾರಿಸಿದಾಗ ಬಳ್ಳಾರಿ ಜಿಲ್ಲೆಯ ಕರ್ನಾಟಕದ ಗಡಿಯ ಕೊನೆಯ ಹಳ್ಳಿಯಾದ ಜೋಳದ ರಾಶಿಯವರು ಎಂದು ತಿಳಿಯಿತು. ಜೋಳದರಾಶಿಯವರೆಂದ ಕೂಡಲೆ ಮತ್ತಷ್ಟು ಸ್ನೇಹ ಬೆಳೆಸಿದೆ. ಪ್ರಸಿದ್ಧ ಗಮಕಿಗಳೂ ನಟರೂ ಆಗಿದ್ದ ಜೋಳದ ರಾಶಿಯ ದೊಡ್ಡನಗೌಡರು ಬದುಕಿದ್ದಾಗ, ಅವರ ಸಂದರ್ಶನ ಮಾಡಲು ಹೋಗಿ ಕೆಲವು ದಿನ ಅವರಲ್ಲಿ ಉಳಿದುಕೊಂಡಿದ್ದೆ. ಹನುಮಂತಪ್ಪ ಯಾವಾಗಲೂ ಬೀಡಿ ಸೇದುತ್ತ ಕೊಖಕೊಖ ಕೆಮ್ಮುತ್ತ ಕ್ಯಾಕರಿಸಿ ಕಫ ತುಪ್ಪುತ್ತ ಇದ್ದನು. ಅವನು ದೊಡ್ಡನಗೌಡರ ಅಪ್ಪನ ಮೇಲೆ ಬೇಕಾದಷ್ಟು ಕಥೆಗಳನ್ನು ಹೇಳುತ್ತಿದ್ದನು. ಒಂದು ಕಥೆಯೆಂದರೆ, ದೊಡ್ಡನಗೌಡರ ಅಪ್ಪ ಕಂಬಳಿ ಹಾಕಿಕೊಂಡು ಜಗುಲಿ ಮೇಲೆ ಕೂತಾಗ, ದಲಿತಕೇರಿಯ ಕೆಲವರು ದೊಣ್ಣೆ ಹಿಡಿದುಕೊಂಡು ಪೇಟ ಕಟ್ಟಿಕೊಂಡು, ರಾಜಸಭೆಯಲ್ಲಿ ದಂಡಧಾರಿಗಳು ನಿಲ್ಲುವಂತೆ, ಗೌಡರ ಹಿಂದೆ ಹೋಗಿ ನಿಲ್ಲುವ ಕೆಲಸವನ್ನು ಖುಷಿಗಾಗಿ ಮಾಡುತ್ತಿದ್ದರಂತೆ. ಅದನ್ನು ಮಾಡಲು ಪೈಪೋಟಿಯಂತೆ. ಅವರಪ್ಪ ಆ ಕೆಲಸ ಮಾಡುವಾಗ ಇವನು ಚಿಕ್ಕವನಂತೆ. ಅದನ್ನು ಹೆಮ್ಮೆಯಿಂದ ಹೇಳಿಕೊಂಡ.

ಮುದುಕನಿಗೊಬ್ಬ ಮೊಮ್ಮಗನಿದ್ದ. ಅವನು ಜೋಳದ ರಾಶಿಯಲ್ಲಿ ಲಿಂಗಾಯತರ ಹೋಟಲಿನಲ್ಲಿ ಹೊರಗೆ ಕೂರಿಸಿ ಟೀ ಕೊಡುವ ಲಿಂಗಾಯತರ ಹೋಟಲಿನಲ್ಲಿ ಪ್ರತಿಭಟನೆ ಮಾಡಿದನವನು. ಈಗ ಎಲ್ಲರಿಗೂ ಪ್ಲಾಸ್ಟಿಕ್ ಲೋಟಗಳಲ್ಲಿ ಟೀ ಬಂದಿದೆಯಂತೆ. ಎಸ್.ಎಸ್.ಎಲ್.ಸಿ. ಫೇಲಾಗಿದ್ದ ಅವನು ಬಳ್ಳಾರಿಯಲ್ಲಿ ದಿನಸಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ತಿಂಗಳಿಗೆ 1,500/-ರೂ. ಸಂಬಳ. ಅವನ ಬಗ್ಗೆ ಮುದುಕನಿಗೆ ಹೆಮ್ಮೆ. ಏನಾದರೂ ನಮ್ಮ ಮನೆತನಕ್ಕೆ ಒಳ್ಳೇದಾದರೆ ಅವನಿಂದಲೆ ಎಂದು ಹೇಳುತ್ತಿದ್ದನು. ದೇವನೂರರ 'ಒಡಲಾಳ'ದ ಸಾಕವ್ವ ಹಾಗೂ ಅವಳ ಮೊಮ್ಮಗ ಶಿವೂನ ನೆನಪಾಯಿತು. ನನ್ನ ಕುತೂಹಲ ಎಂದರೆ, ಇವರು ಓಟುಮಾಡಲು ಹೋಗುತ್ತಾರೆಯೋ ಇಲ್ಲವೇ ಎಂಬುದು. ಕೇಳಿದೆ. "ಸಾರ್ಜು ಹಾಕಿಕೊಂಡು ಹೆಂಗ ಹೋಗೋದು ಧಣಿ ? ಯಾರಾನ ಬಂದು ಸಾರ್ಜು ಹಾಕ್ಕೊಂಡು ಕರಕೊಂಡು ಹೋದರೆ ಹೋಗತೀವಿ" ಎಂದನು. ಅವನಿಗೆ ತಮ್ಮಿಬ್ಬರ ಹೆಸರಲ್ಲಿ ಯಾರಾದರೂ ಓಟಿಗೆ ನೂರು ರೂಪಾಯಿ ಯಂತೆ ಯಾರಿಂದಲಾದರೂ ದುಡ್ಡು ಇಸಿದುಕೊಂಡಿರಬಹುದು

ಎಂದು ಆತಂಕ. ಯಾರಿಗೆ ಓಟು ಹಾಕಬೇಕು. ಯಾರು ಗೆಲ್ಲಬೇಕು ಎನ್ನುವುದಕ್ಕಿಂತ ಮುಖ್ಯವಾದುದು ಬಸ್‌ಚಾರ್ಜಿನ ಸಮಸ್ಯೆ. ನಾನು ''ಅಲ್ಲ ತಾತ, ಯಾರಿಗೆ ಓಟು ಹಾಕುತ್ತೀಯಾ ? ದುಡ್ಡು ಕೊಟ್ಟವರಿಗೋ, ನಿನಗೆ ಇಷ್ಟ ಬಂದವರಿಗೋ ?'' ಎಂದೆ. ''ಎಲ್ಲಾನ ಉಂಟಪ್ಪ ? ರೊಕ್ಕ ಕೊಟ್ಟೋರಿಗೆ ಓಟು ಹಾಕೋದು ಧರ್ಮ'' ಎಂದನು. ''ಇಲ್ಲಿತನಕ ಯಾರಿಗೆ ಓಟು ಕೊಟ್ಟಿದ್ದೀಯಾ ?'' ಎಂದೆ. ''ಹಸ್ತಕ್ಕೆ'' ಎಂದನು.

ಕೊನೆಗೂ ಈ ಮುದುಕರು ಪವಿತ್ರ ಮತದಾನ ಮಾಡಲು ತಮ್ಮ ಹಳ್ಳಿಗೆ ಹೋಗಲು ಆಗಲಿಲ್ಲ. ಕಾರಣ ಅವರನ್ನು ಚಾರ್ಜು ಹಾಕಿ ಕರೆದುಕೊಂಡು ಹೋಗಲು ಯಾರೂ ಬರಲಿಲ್ಲ. ಹೊಸಪೇಟೆಗೆ ಮೊದಲ ಮಳೆ ಬಿದ್ದು ಥಂಡಿ ಗಾಳಿ ಬೀಸಲು ಶುರುವಾಯಿತು. ಮುದುಕನ ದಮ್ಮು ಹೆಚ್ಚಾಯಿತು. ಒಂದು ವಾರದ ನಂತರ ನೋಡಿದರೆ, ಅವರ ಶೆಡ್ಡಿನಲ್ಲಿ ಹೊಸ ಮುದುಕ ಬಂದಿದ್ದ. ವಿಚಾರಿಸಲು, ಮುದುಕ ಸತ್ತುಗಿತ್ತಾನೆಂದು ಮುನ್ನೆಚ್ಚರಿಕೆ ಯಿಂದ ಮನೆಯ ಕಂಟ್ರಾಕ್ಟರನು ಇಬ್ಬರನ್ನು ಬಿಡಿಸಿ, ಇನ್ನೊಬ್ಬ ನನ್ನು ನೇಮಿಸಿದ್ದ. ವೃದ್ಧ ದಂಪತಿಗಳು ತಮ್ಮ ಬಟ್ಟೆ ಹಾಸಿಗೆ ಪಾತ್ರೆಗಳೆಲ್ಲವನ್ನು ಮೂರು ಸಿಮೆಂಟು ಚೀಲಗಳಲ್ಲಿ ತುಂಬಿ ಕೊಂಡು ಸೈಕಲ್ಲು ರಿಕ್ಷಾದಲ್ಲಿ ಕುಳಿತು ಊರಿಗೆ ಹೋಗುತ್ತೇವೆಂದು ಹೊರಟು ಹೋದರಂತೆ. ಜೋಳದರಾಶಿ ಮತಗಟ್ಟೆ ಬರುವ ಬಳ್ಳಾರಿ ಅಸೆಂಬ್ಲಿ ಸೀಟಿಗೂ ಎಂಪಿ ಸೀಟಿಗೂ ಈ ಸಲ ಬಿಜೆಪಿ ಬಂದಿದೆ. ಸೋನಿಯಾ ಗಾಂಧಿಯನ್ನು ಗೆಲ್ಲಿಸಿ ಖ್ಯಾತವಾಗಿದ್ದ ಬಳ್ಳಾರಿಯ 55 ವರುಷಗಳ ಚರಿತ್ರೆಯಲ್ಲಿ ಮೊದಲ ಸಲ ಕಾಂಗ್ರೆಸ್ಸು ಸೋತಿದೆ.

ಈ ಮೂರೂ 'ವಡ್ಡಾರಾಧನೆ'ಯ ಕಥೆಗಳು ಈ ಸಲದ ಚುನಾವಣೆಗೆ ಸಂಬಂಧಪಟ್ಟವು. ಇಂಡಿಯಾದ ಮಹಾಚುನಾವಣೆ ಯೆಂಬ ಸಾಗರದಿಂದ ಈ ಮೂರು ಹನಿಗಳನ್ನು ಇಟ್ಟುಕೊಂಡು ಇಡೀ ಚುನಾವಣಾ ರಾಜಕೀಯವನ್ನು ಮೌಲ್ಯಮಾಪನ ಮಾಡ ಬಹುದೇ ಎಂಬ ಪ್ರಶ್ನೆ ಬರಬಹುದು. ಇದಕ್ಕೆ ವಿರುದ್ಧವಾದ ನಿದರ್ಶನಗಳೂ ಸಿಕ್ಕಿಯಾವು. ಆದರೆ ಖಂಡಿತವಾಗಿಯೂ ಇಂತಹ ಚಿಕ್ಕಪುಟ್ಟ ಕಥೆಗಳು ಭಾರತದ ಚುನಾವಣಾ ರಾಜಕಾರಣ ವನ್ನು ತಮ್ಮದೇ ಆದ ರೀತಿಯಲ್ಲಿ ಮೌಲ್ಯಮಾಪನ ಮಾಡಬಲ್ಲವು. ಕೊನೆಯ ಪಕ್ಷ ಇವು ''ನಮ್ಮ ಜನ ಬಡವರು ಅನಕ್ಷರಸ್ಥರು ಆದರೂ ಪ್ರಜ್ಞಾವಂತರು. ತಮ್ಮ ಮತವನ್ನು ಎಲ್ಲ ಪ್ರಲೋಭನೆಗಳ ಆಚೆ ಹೋಗಿ ಚಲಾಯಿಸುತ್ತಾರೆ'' ಎಂಬ ಅರೆಸತ್ಯದ ಸಂಕಥನವನ್ನು ಒಡೆಯುತ್ತವೆ.

ಈ ಮಾತುಗಳನ್ನು ಹೇಳುವಾಗ ನಾವು ನಮ್ಮ ಚುನಾವಣೆಯ ಪರಿಣಾಮಗಳನ್ನು ಸಿನಿಕರಾಗಿಯೇ ನೋಡಬೇಕಿಲ್ಲ. ಈಸಲದ ಚುನಾವಣೆಯ ಕೊನೆಯ ಪಕ್ಷ ದೇಶದ ಮಟ್ಟದಲ್ಲಿ 'ಮಾನವತೆಯ ಮೇಲೆ ಘೋರ ಅಪರಾಧ' ಎಸಗಿದ ಒಂದು ಸರಕಾರವನ್ನು ಕಿತ್ತುಹಾಕಿದೆ. ಆದರೆ ಅದೇ ಪಕ್ಷಕ್ಕೆ ಕರ್ನಾಟಕದಲ್ಲಿ ಹಿಂದೆಂದೂ ಇಲ್ಲದಷ್ಟು ಬಲ ಕೊಟ್ಟಿದೆ. ಬಸವಣ್ಣನ ಅನುಯಾಯಿ ಗಳಾದ ಕರ್ನಾಟಕದ ಲಿಂಗಾಯತರು ತಮಗೆ ಕರ್ನಾಟಕದ ರಾಜಕಾರಣದಲ್ಲಿ ಸೂಕ್ತ ಪ್ರಾತಿನಿಧ್ಯವನ್ನು ಅರಸುತ್ತ ಈ ಹೊತ್ತು ಬಿಜೆಪಿಯ ಅಂಗಳದಲ್ಲಿ ನಿಂತುಕೊಂಡು ಈ ಬಲವನ್ನು ಕೊಟ್ಟಿದ್ದಾರೆ. ಅವರ ಸಾಮಾಜಿಕ ರಾಜಕೀಯ ಆಕಾಂಕ್ಷೆಗಳನ್ನು ಬಸವಣ್ಣನ ''ಉಳ್ಳವರು ಶಿವಾಲಯವ ಮಾಡುವರು'' ವಚನವಾಗಲೀ, ಅಥವಾ ತೋಂಟದಾರ್ಯಸ್ವಾಮಿಗಳು, ಶಿವಮೂರ್ತಿ ಶರಣರು ಮುಂತಾದ ಪ್ರಮುಖ ಸ್ವಾಮಿಗಳು ತೆಗೆದುಕೊಂಡ ಕೋಮುವಾದಿ ವಿರೋಧಿ ನಿಲುವಾಗಲೀ ತಡೆದಂತಿಲ್ಲ. ತಮಿಳುನಾಡು, ಕೇರಳ, ಆಂಧ್ರಪ್ರದೇಶಗಳಲ್ಲಿ ಇಂದು ಬಿಜೆಪಿ ನಾಮಾವಶೇಷವಾಗಿದೆ. ಆದರೆ ಪಂಪ, ಬಸವಣ್ಣ, ಕುವೆಂಪು ಹುಟ್ಟಿದ ನಾಡಲ್ಲಿ, ಅದೂ ಕುವೆಂಪು ಜನ್ಮ ಶತಮಾನೋತ್ಸವದ ವರುಷದಲ್ಲಿ ಕರ್ನಾಟಕದಲ್ಲಿ ಬಿಜೆಪಿಯು ಇಷ್ಟೊಂದು ಶಕ್ತಿಯನ್ನು ಪಡೆದುಕೊಂಡಿದೆ.

ಇದಕ್ಕೆ ಕಾರಣಗಳನ್ನು ನಾವು ಕಾಂಗ್ರೆಸ್ಸಿನ ಚುನಾವಣೆಯನ್ನು ಮನಸ್ಸಲ್ಲಿಟ್ಟುಕೊಂಡು ಆಡುವ ರಾಜಕೀಯ ತಂತ್ರಗಾರಿಕೆ ಯಲ್ಲಿಯೇ ಹುಡುಕಬೇಕು. ಆದರೆ ಈ ತಂತ್ರಗಾರಿಕೆಯೂ ನಡೆಯದೆ, ಬಾಬಾಬುಡನ್‌ಗಿರಿಯಲ್ಲಿ ಆಟವಾಡಿದ ಕಾಂಗ್ರೆಸ್ಸಿನ ಡಿ.ಬಿ. ಚಂದ್ರೇಗೌಡರು ಸೋತರು. ಜನ ಆಳುವ ಎಲ್ಲ ಪಕ್ಷಗಳ ಮೇಲೆ ನಂಬಿಕೆ ಕಳೆದುಕೊಂಡಿದ್ದಾರೆ. ಚುನಾವಣಾಪೂರ್ವ ಸಮೀಕ್ಷೆಯಲ್ಲಿ ಈಟಿವಿಯ ವರದಿಗಾರ ಒಬ್ಬ ಹುಸೇನಬಿ ಎಂಬ ಮುಸ್ಲಿಂ ಮುದುಕಿಯನ್ನು ಮಾತಾಡಿಸುತ್ತಿದ್ದ. ಅವಳು ಹೇಳಿದಳು : ''ಅಬತಕ್ ಹಾತಕೋ ದಾಲೆ. ಕ್ಯಾಭಿ ನಹಿಹುವಾ. ಏಬಾರ್ ರಾಮುಲುಕಾ ದಾಮನ್ ಪಡಕ್ ಲಿಯೇ ಹೈ'' (ಈತನಕ ಹಸ್ತಕ್ಕೆ ಕೊಟ್ಟೆವಿ. ಏನೂ ಆಗಲಿಲ್ಲ. ಈಸಲ ಏನಾದರೂ ಆಗಬಹುದು ಎಂದು ರಾಮುಲು ಸೆರಗನ್ನು ಹಿಡಿದಿದ್ದೇವೆ.) ನನಗೆ ಸೋಜಿಗವಾಯಿತು. ಗುಜರಾತಿನಲ್ಲಿ ಏನೇನಾಯಿತು ಎಂಬುದು ಮುದುಕಿಗೆ ಗೊತ್ತಿಲ್ಲವೇ ? ಬಿಜೆಪಿಯ 'ದಾಮನ್' ಹಿಡಿಯುವುದು ಎಂದರೆ ಏನರ್ಥ ? ''ಏನಾಗಿದೆ, ಏನಾಗಿದೆ ಜನಕ್ಕೆ ?''

ಬಿಜೆಪಿಯ ಬಗೆಗಿನ ಪ್ರಗತಿಪರಪರ ಪ್ರತಿರೋಧವು ಸಹಜವಾಗಿದೆ. ಯಾಕೆಂದರೆ ಅದು ಮನುಷ್ಯರಲ್ಲಿ ವಿದ್ವೇಷ ಹುಟ್ಟಿಸಿ ರಕ್ತಹರಿಸಿ ಗೆಲ್ಲಬೇಕೆಂದು ಬಯಸುವ ನೀಚ ರಾಜಕಾರಣ ಮಾಡುತ್ತದೆ. ಆದರೆ ಎಷ್ಟೋಸಲ ಅದರ ಬಗೆಗಿನ ಪ್ರಗತಿಪರರ ಆತಂಕ ಹಾಗೂ ವಿರೋಧಗಳು ಅದರ ಬದಲಿಗೆ ಇರುವ ಇತರೆ ಪಕ್ಷಗಳನ್ನು ನಿಷ್ಠುರವಾಗಿ ಮೌಲ್ಯಮಾನಪ ಮಾಡಲು ಅಡ್ಡಿಯಾಗಿದೆ ಅನಿಸುತ್ತದೆ. ''ಬಿಜೆಪಿ ಗೆಲ್ಲಿಸಿದಿರಲ್ಲರೀ'' ಎಂದು ವಿಷಾದ ಸೂಚಿಸಿದರೆ, ಜನ ''ಇಲ್ಲಿಂದ ಗೆದ್ದುಹೋದ ಸೋನಿಯಾ ಬಳ್ಳಾರಿಗೆ ಏನು ಮಾಡಿದರು?'' ಸರಳವಾಗಿ ಕೇಳುತ್ತಾರೆ. ಆದ್ದರಿಂದ ಸತ್ಯ, ಬಿಜೆಪಿಯ ಸಂಘಪರಿವಾರದ ಚಿಂತನೆಗೆ ಜನ ಒಲಿದಿದ್ದಾರೆ ಎನ್ನುವುದೋ, ಜೋಳದರಾಶಿಯ ಹನುಮಂತಪ್ಪನ ಸಿದ್ಧಾಂತದಂತೆ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ರೊಕ್ಕ ಕೊಟ್ಟವರಿಗೆ ಓಟುಕೊಡುವುದು ಧರ್ಮ ಎಂದು ನಂಬಿದ್ದಾರೋ, ಕಳೆದ 50 ವರುಷ ಕಾಂಗ್ರೆಸ್ಸಿಗೆ ಓಟುಹಾಕಿ ಏನೂ ಬದಲಾವಣೆಯಾಗಿಲ್ಲ ಎಂಬ ಹತಾಶೆಯಿಂದ ಆಡಳಿತದಲ್ಲಿದ್ದ ಪಕ್ಷಗಳನ್ನು ತಿರಸ್ಕರಿಸಿದ್ದಾರೆ ಎನ್ನುವುದೋ ? ಕೊನೆಯ ಕಾರಣ ನಿಜವಾದರೆ, ಬಾರಿಸುವುದು ಕೊಟ್ಟು ಊದುವುದು ಕೊಂಡಂತೆ. ಕಾಂಗ್ರೆಸ್ಸಿಗೆ ಕೊಟ್ಟ ಶಿಕ್ಷೆಯ ಫಲವಾಗಿ ಬಂದಿರುವ ಬಿಜೆಪಿ ಎಂತಹ ಪರ್ಯಾಯ ? ಜನ ಹೇಳುತ್ತಾರೆ ಬಳ್ಳಾರಿಯ ಹಿಂದಿನ ಶಾಸಕ ದಿವಾಕರ ಬಾಬುವಿನಂತೆ ಈಗಿನ ಶಾಸಕ ಕೂಡ ರೌಡಿ ಹಿನ್ನೆಲೆಯವರು ಎಂದು. ಚಿಕ್ಕಮಗಳೂರಿನ ಮುಸ್ಲಿಮರೇ ಸಗೀರ್ ಅಹಮದ್‌ರ ರಾಜಕಾರಣಕ್ಕೆ ರೋಸಿ ಹೋಗಿದ್ದಾರೆ. ಆದರೆ ಅವರ ಕೋಪದ ಲಾಭ ಪಡೆದು ಬದಲಿಯಾಗಿ ಬಂದಿರುವ ವ್ಯಕ್ತಿ ಭಜರಂಗದಳದ ವ್ಯಕ್ತಿ, ಗೆದ್ದ ಕೂಡಲೆ ಬಾಬಾಬುಡನ್‌ಗಿರಿಯ ಗುಹೆಗೆ ನುಗ್ಗಿ ಅದರ ವಿಮೋಚನೆ ಮಾಡುತ್ತೇನೆ ಎಂದು ಹೇಳಿದರು. ಒಂದೋ, ಜನಕ್ಕೆ ಆಯ್ಕೆಗಳೇ ಇಲ್ಲದೆ ಅವರೂ ಸಿನಿಕರಾಗಿದ್ದಾರೆಯೋ ? ಚುನಾವಣೆಯಲ್ಲಿ ಜನರ ಮನಸ್ಥಿತಿ ಕೆಲಸ ಮಾಡುವ ವಿಧಾನದ ಬಗ್ಗೆ ಯಾವ ಸಮೀಕರಣವೂ ಸರಳೀಕರಣವಾದೀತು ಎಂಬ ಭಯವಾಗುತ್ತದೆ.

ಈ ಮೇಲಿನ ಸಂಗತಿಗಳು ಒಂದನ್ನಂತೂ ಖಚಿತವಾಗಿ ಸೂಚಿಸುತ್ತವೆ. ಅದೆಂದರೆ ಜನರ ಬಡತನ ಅಸಹಾಯಕತೆಗಳು ವಿಚಿತ್ರವಾದ ತೀರ್ಮಾನಗಳಿಗೆ ಕಾರಣವಾಗುತ್ತವೆ. ಅವು ಲಖನೊದಲ್ಲಿ ಆದಂತೆ ತುಂಡು ಸೀರೆಗಾಗಿ ಸಾವಿನತನಕ ಕರೆದೊಯ್ಯುತ್ತಿವೆ. ದುಡ್ಡು ಸುರಿದವರಿಗೆ ಓಟು ಕೊಡುವಂತೆ ಮಾಡಿ ಜನರನ್ನು ಭ್ರಷ್ಟರನ್ನಾಗಿಸಿವೆ. ಬದುಕಲು ಊರನ್ನೇ ಬಿಟ್ಟುಹೋಗಿರುವ ಕೋಟೆಕಲ್ಲಿನ ಗುಡಿಸಲಿನವರ ಹಾಗೆ ಮತದಾನವನ್ನು ಧಿಕ್ಕರಿಸಿವೆ. ಈ ಮಹಾಚುನಾವಣೆಗಳು ಬಡಜನರ ಪಾಲಿಗೆ, ಹಣಕೊಡುವ, ಪ್ರಾಣತೆಗೆಯುವ, ಭ್ರಷ್ಟ ಗೊಳಿಸುವ ಕೆಲಸ ಇನ್ನೂ ಮಾಡುತ್ತಿರುತ್ತವೆ. ಅವು ಸಣ್ಣಪುಟ್ಟ ಬಿಡುಗಡೆಯ ನಿಟ್ಟುಸಿರನ್ನು ಬಿಡುವಂತೆ ಬದಲಾವಣೆಗಳನ್ನು ಮಾಡುತ್ತವೆ. ಆದರೆ ನಿರಾಳತೆಯನ್ನಂತೂ ಅಲ್ಲ. ನಿರಾಳತೆ ಎನ್ನುವುದು ಇರುವುದಾದರೆ, ತುಂಡುಬಟ್ಟೆ ಪಡೆಯಲು ಹೋಗಿ ಜೀವಕಳೆದುಕೊಳ್ಳುವ ಪರಿಸ್ಥಿತಿ ದೇಶದಲ್ಲಿ ಇರುವುದಿಲ್ಲ.

- ಕೃಪೆ : ಹೊಸತು

"Achala" 108, Skyline Surabhi,
14 - P, Vidyapeeta Road,
BSK III Stage,
Bangalore - 560 085

To :

Smt/Sri